# ವಿಜಾಪುರ ಜಿಲ್ಲೆಯ

# ಜನಪದ ಕಲೆ ಕಲಾವಿದರು

ಡಾ|| ಎಂ. ಎನ್. ವಾಲಿ

ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು



ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೫

# ವಿಜಾಪುರ ಜಿಲ್ಲೆಯ ಜನಪದ ಕಲೆ–ಕಲಾವಿದರು


## ಡಾ|| ಎಂ. ಎಸ್. ವಾಲಿ

'ಶಿವಯೋಗಿ ನಿಲಯ', ವಿದ್ಯಾನಗರ, ಬಿ.ಎಲ್.ಡಿ.ಇ. ಆಸ್ಪತ್ರೆ ಎದುರು ರಸ್ತೆ,

ವಿಜಾಪುರ–೫೮೬ ೧೦೩



## ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ

ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,

ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

**VIJAPUR JILLEYA JANAPADA KALE-KALAVIDARU**:
By **Dr. M. N. Vali.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalooru-560 054,

ಪ್ರಥಮ ಮುದ್ರಣ : ೨೦೦೮ ಪುಟಗಳು : ೪೮

ಪ್ರತಿಗಳು : ೨೦೦೦

ಬೆಲೆ : **ರೂ. ೧೫** (ಹದಿನೈದು ರೂಪಾಯಿಗಳು)

ಹಕ್ಕುಗಳು : ಲೇಖಕರಿಗೆ ಸೇರಿವೆ.

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ|| ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ|| ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ|| ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು :

**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦.

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ-ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು, ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ ಡಾ. ಎಂ. ಎನ್. ವಾಲಿ ಅವರು **'ವಿಜಾಪುರ ಜಿಲ್ಲೆಯ ಜನಪದ ಕಲೆ-ಕಲಾವಿದರು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೦-೦೩-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ವಿಜಾಪುರ ಜಿಲ್ಲೆಯ ಜನಪದ ಕಲೆ-ಕಲಾವಿದರು

ಜಾನಪದ ಕ್ಷೇತ್ರ ವಿಸ್ತಾರವಾದುದು. ಅದರ ಬೇರುಗಳನ್ನು ಹಲವು ಶಾಸ್ತ್ರಗಳಲ್ಲಿ ಕಾಣುತ್ತೇವೆ. ಜಾನಪದದ ಕೊಡುಗೆ ಮಾನವ ಸಂಸ್ಕೃತಿಗೆ ಅಪಾರ. ಜಾನಪದದ ಪೂರ್ಣಜ್ಞಾನವಿಲ್ಲದೆ ಮಾನವ ಸಂಸ್ಕೃತಿಯ ಸಮಗ್ರ ಅಧ್ಯಯನ ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಇದು ವಿರಾಟಸ್ವರೂಪಿ; ವಿಶ್ವವ್ಯಾಪಿ. ಇದಕ್ಕೆ ಸಾವಿಲ್ಲ. ಅಂದರೆ ಇದು ಚಿರಂಜೀವಿ. ಜಾನಪದದಲ್ಲಿ ಜನಪದಸಾಹಿತ್ಯ, ಕಲೆ, ವಿಜ್ಞಾನ, ಜನತೆಯ ಸಂಸ್ಕೃತಿ ಮೊದಲಾದವುಗಳು ಸಮಾವೇಶವಾಗುತ್ತವೆ.

ಜನಪದ ಹಾಡು, ಕುಣಿತಗಳು ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗದಿಂದ ಚಿಮ್ಮುವ ಚಿಲುಮೆಯಾಗಿ ಹೊರಬಂದಿವೆ. ಅವು ವಿಕಾಸಗೊಂಡುದು ರೈತರ ಪರಿಸರದಲ್ಲಿ. ಈ ಕಲಾವಿದರಿಗೆ ಸ್ವಾನುಭವವೇ ಗುರು. ಗ್ರಾಮೀಣರು ತಮ್ಮ ಸಮಸ್ತ ಬದುಕಿಗೂ ಮೂಲವಾದ ದೈವೀಶಕ್ತಿಯನ್ನು ಆರಾಧಿಸುತ್ತಾ ಬಂದಿದ್ದಾರೆ. ಇದರಿಂದಾಗಿ ಅವರಿಗೆ ನೆಮ್ಮದಿಯೂ ದೊರೆತಿದೆ. ಹೀಗೆ ದೈವೀಶಕ್ತಿಯನ್ನು ಪೂಜಿಸುವಾಗ ಭಕ್ತಿಭಾವ ತುಂಬಿ ಹಾಡುತ್ತ ಬಂದಿದ್ದಾರೆ; ತಮ್ಮನ್ನೇ ತಾವು ಮರೆತು ಕುಣಿಯುತ್ತ ಬಂದಿದ್ದಾರೆ. ಹೀಗೆ ಹುಟ್ಟಿಕೊಂಡ ಹಾಡು ಕುಣಿತಗಳಲ್ಲಿ ಕಾಲಗತಿಸಿದಂತೆ ಕೆಲವು ಮನರಂಜನೆಗೆ ಮೀಸಲಾದವು. ಮತ್ತೆ ಕೆಲವು ಉಪಜೀವನಕ್ಕೆ ಸೀಮಿತವಾದವು. ಇನ್ನುಳಿದವು ದೈವೀ ಆರಾಧನೆಗಾಗಿಯೇ ಉಳಿದುಕೊಂಡು ಬಂದವು.

ಜನಪದವು ಪರಿಸರದ ಸೃಷ್ಟಿ. ಅದು ಒಂದು ಪರಿಸರದ ಜನರ ಸರ್ವಸ್ವವನ್ನು ಗರ್ಭೀಕರಿಸಿಕೊಂಡು ಮುನ್ನಡೆಯುವಂತಹದು. ಈ ದೃಷ್ಟಿಯಿಂದ ಹೇಳುವದಾದರೆ ಜಾನಪದ ಒಳಗೊಳ್ಳದ ವಿಷಯವೇ ಇಲ್ಲ.

ಸೃಜನಾತ್ಮಕ ಸಾಹಿತ್ಯ ಮತ್ತು ಕಲೆಗಳಿಗೆ ಅಧುನಿಕತೆಯ ಗಂಡುಗಾಳಿಯಿಂದ ಗ್ರಹಣ ಬಡಿದು ಕೆಲವೊಂದು ಸಾಹಿತ್ಯ ಮತ್ತು ಕಲೆಗಳು

ಹೇಳಹೆಸರಿಲ್ಲದಂತಾದವು. ನಾಟಕ, ಸಂಗೀತ, ಚಲನಚಿತ್ರಗಳ ಕಾರಣವಾಗಿ ಕೆಲವು ಕಲೆಗಳು ಕೊಚ್ಚಿಹೋದವು. ಉಳಿದವುಗಳನ್ನಾದರೂ ರಕ್ಷಿಸದಿದ್ದರೆ ಈ ಅಮೂಲ್ಯ ಸಂಪತ್ತು ಉಳಿಯಲಾರದು. ಅದಕ್ಕಾಗಿ ನಾವು ನಾಳೆ ಎನ್ನದೆ ಈ ಕಾರ್ಯಕ್ಕೆ ತೊಡಗಬೇಕಾಗಿದೆ.

ಗ್ರಾಮೀಣ ಜನಪದ ಕಲೆಗಳು ದೈವೀ ಆರಾಧನೆಯ ಹಿನ್ನೆಲೆಯಲ್ಲಿಯೇ ಬೆಳೆದುಬಂದವುಗಳಾಗಿವೆ. ಅವುಗಳಲ್ಲಿ ಕೆಲವು ವಾದ್ಯಪ್ರಧಾನ ಕಲೆಗಳಾಗಿದ್ದರೆ, ಮತ್ತೆ ಕೆಲವು ಗೀತಪ್ರಧಾನ ಕಲೆಗಳು, ಇನ್ನುಳಿದವು ಅಭಿನಯ(ಕುಣಿತ) ಪ್ರಧಾನಕಲೆಗಳಾಗಿವೆ. ಆದರೆ ಇವೆಲ್ಲ ಅಧ್ಯಯನದ ಅನುಕೂಲಕ್ಕಾಗಿ ಮಾಡಿದ ವಿಭಾಗಗಳೇ ವಿನಃ ಒಂದರಲ್ಲಿ ಇನ್ನೊಂದು ಸೇರಿಕೊಂಡಿಲ್ಲ ಎಂದು ಹೇಳಲಾಗದು. ಉದಾಹರಣೆಗಾಗಿ ಗೀಗೀ ಹಾಡಿನ ಕಲೆ ಗೀತಪ್ರಧಾನ ಎಂದು ಹೇಳುತ್ತಿದ್ದರೂ ಅದರಲ್ಲಿ ಡಪ್ಪು, ತುಂತುಣಿ, ತಾಳ-ಈ ವಾದ್ಯಗಳು ಇದ್ದೇ ಇರುತ್ತವೆಂಬುದನ್ನು ಮರೆಯಬಾರದು.

ಉತ್ತರಕರ್ನಾಟಕದ ಬಯಲುಸೀಮೆಯೆಂದೇ ಹೆಸರಾದ ವಿಜಾಪುರ ಜಿಲ್ಲೆಯ ಜನಪದ ಸಾಹಿತ್ಯ ಮತ್ತು ಕಲೆಗಳು ವೈಶಿಷ್ಟ್ಯಪೂರ್ಣವಾಗಿವೆ; ವೈವಿಧ್ಯಮಯವಾಗಿವೆ. ಇಲ್ಲಿಯ ಜನಪದ ಕಲೆಗಳಲ್ಲಿ ಸಾಹಿತ್ಯ, ಕಲೆ, ಸಂಸ್ಕೃತಿಗಳ ಮುಪ್ಪುರಿಯಿದೆ. ಈ ಜಿಲ್ಲೆಯುಲ್ಲಿ ಕಾಣುವ ಚೌಡಿಕೆ, ಶ್ರೀಕೃಷ್ಣಪಾರಿಜತ, ಬಯಲಾಟಗಳಂತಹ ಕಲೆಗಳು ಕರ್ನಾಟಕದ ದಕ್ಷಿಣ ಭಾಗದಲ್ಲಿ ಕಾಣುವದಿಲ್ಲ. ಹಾಗೆಯೇ ಆ ಭಾಗದಲ್ಲಿರುವ ಕಂಸಾಳೆ, ಪಟದಕುಣಿತ, ಪಂಜಿನಕುಣಿತ, ಕರಪಾಲಮೇಳ ಕಲೆ ಇವು ನಮ್ಮಲ್ಲಿ ಕಾಣುವುದಿಲ್ಲ. ಅದೇನೇ ಇದ್ದರೂ ನಮ್ಮ ಜಿಲ್ಲೆಯ ಜನಪದ ಸಾಹಿತ್ಯ ಮತ್ತು ಕಲೆಗಳು ಅತ್ಯಂತ ಶ್ರೀಮಂತವಾಗಿವೆ.

ವಿಜಾಪರ ಜಿಲ್ಲೆಯ ಜನಪದ ಕಲೆಗಳು ಹಾಗೂ ಆಯಾ ಕಲೆಗಳ ಪ್ರಮುಖ ಕಲಾವಿದರನ್ನು ಈ ಪುಟ್ಟ ಕೃತಿಯಲ್ಲಿ ಪರಿಚಯಿಸಲಾಗಿದೆ. ದೈವೀ ಆರಾಧನೆಯ ಕಲೆಗಳು, ವಾದ್ಯ ಪ್ರಧಾನ ಕಲೆಗಳು, ಗೀತಪ್ರಧಾನ ಕಲೆಗಳು, ಕುಣಿತ ಪ್ರಧಾನ ಕಲೆಗಳು, ಸಮ್ಮಿಶ್ರಕಲೆಗಳು ಎಂಬುದಾಗಿ ವಿಭಜಿಸಿ ಆಯಾ ವಿಭಾಗದಲ್ಲಿ ಬರುವ ಕಲೆಗಳನ್ನು ಹಾಗೂ ಕಲಾವಿದರನ್ನು ಪರಿಚಯಿಸಿಕೊಡುವ ಪ್ರಯತ್ನ ಮಾಡಲಾಗಿದೆ.

# ೧. ದೈವೀ ಆರಾಧನೆಯ ಕಲೆಗಳು

## ಭಜನೆ

ದೈವಾರಾಧನೆಯಲ್ಲಿ ಭಜನೆಗೆ ವಿಶಿಷ್ಟ ಸ್ಥಾನವಿದೆ. ದೇವರನ್ನು ಕುರಿತು ಭಕ್ತಿಯಿಂದ ಹಾಡುವ ಹಾಡುಗಳಿಗೆ ಭಜನೆ ಎನ್ನುವರು. ಇದು ಸಾಮಾನ್ಯವಾಗಿ ಮೇಳಗೀತೆ. ಭಜನೆ ಎಂಬುದು ದೇವರಿಗೆ ಸಲ್ಲಿಸುವ ಸೇವೆ. ವಿಜಾಪುರ ಜಿಲ್ಲೆಯ ಪ್ರತಿಯೊಂದು ಹಳ್ಳಿಗಳಲ್ಲಿ ಭಜನಾ ಸಂಘಗಳಿವೆ. ಈ ಸಂಘದಲ್ಲಿ ಮಕ್ಕಳಿಂದ ಮುದುಕರವರೆಗೆ ಎಲ್ಲ ವಯಸ್ಸಿನವರೂ ಇರುತ್ತಾರೆ. ಸುಮಾರು ಹತ್ತೆಂಟು ಕಲಾವಿದರು ಸೇರಿ ಭಜನಾಮಂದಿರ ಇಲ್ಲವೆ ಊರಿನ ದೇವಮಂದಿರದಲ್ಲಿ ರಾತ್ರಿಹೊತ್ತು ಎಂಟು ಗಂಟೆಯಿಂದ ತಾಸೆರಡು ತಾಸು ಈ ಕಾರ್ಯಕ್ರಮ ಜರುಗುತ್ತದೆ. ಇವರಿಗೆ ವೇಷ ಭೂಷಣದ ಕಟ್ಟುಪಾಡುಗಳಿಲ್ಲ. ಇವರೆಲ್ಲ ತಮ್ಮ ನಿತ್ಯದ ವೇಷದಲ್ಲಿಯೇ ಇರುತ್ತಾರೆ. ಈ ಮೇಳದವರು ಹಾರ್ಮೋನಿಯಂ, ತಾಳ, ದಮಡಿಗಳೊಂದಿಗೆ ಮುಮ್ಮೇಳ, ಹಿಮ್ಮೇಳವಾಗಿ ಹಾಡುತ್ತಾರೆ. ಹಾರ್ಮೋನಿಯಂ ನುಡಿಸುತ್ತ ಒಬ್ಬರು ಮುಮ್ಮೇಳವಾಗಿ ಹಾಡಿದರೆ ಉಳಿದವರು ಹಿಮ್ಮೇಳವಾಗಿ ಹಾಡುವರು, ಭಜನೆಯಲ್ಲಿ ಶಿವಭಜನೆ, ಹರಿಭಜನೆ, ರಾಮಭಜನೆ ಮೊದಲಾದ ವಿಧಗಳಿವೆ.

ಪ್ರತಿ ಸೋಮವಾರ, ಗುರುವಾರ, ಶನಿವಾರ ಹೀಗೆ ಆಯಾ ವಾರಗಳಂದು ಭಜನೆ ನಡೆಯುತ್ತದೆ. ಶ್ರಾವಣ ಮಾಸದಲ್ಲಿ ಪ್ರತಿದಿನ ಸಾಯಂಕಾಲ ಶಿವಭಜನಾ ಕಾರ್ಯಕ್ರಮವಿರುತ್ತದೆ. ಗುರುಗಳ, ಸಂತರ ಪುಣ್ಯತಿಥಿ, ಹಿರಿಯರ ಅಂತ್ಯಕ್ರಿಯೆಗಳಲ್ಲಿ ಭಜನೆ ನಡೆಯುತ್ತದೆ. ಇಲ್ಲಿ ಜೀವನದ ನಶ್ವರತೆ, ಮಾನವನ ಕರ್ತವ್ಯ, ಬದುಕಿನ ಸಾರ್ಥಕತೆ, ಕುರಿತ ಹಾಡುಗಳು ಇರುತ್ತವೆ.

ಭಜನಾಮೇಳದವರು ಸಾಮಾನ್ಯವಾಗಿ ನಿಜಗುಣ ಶಿವಯೋಗಿಗಳ, ಸರ್ಪಭೂಷಣರ, ಮುಪ್ಪಿನಾರ್ಯರ, ಕಡಕೋಳ ಮಡಿವಾಳಪ್ಪನವರ, ಶಿಶುನಾಳ ಶರೀಫರ, ಸರ್ವಜ್ಞಕವಿಯ, ಶರಣರ ವಚನ ಹಾಗೂ ಹಾಡುಗಳನ್ನು

ಹಾಡುತ್ತಾರೆ. ಪ್ರತಿಯೊಂದು ಹಾಡಿನ ಕೊನೆಗೆ ಮುಮ್ಮೇಳದವನು 'ಜಯಾ ಜಯ ನಮಃ ಪಾರ್ವತೀ ಪತಿ' ಎಂದು ಹೇಳಿದರೆ ಉಳಿದವರು 'ಹರಹರ ಮಹಾದೇವ' ಎಂದು ಒಟ್ಟಾಗಿ ಹೇಳುತ್ತಾರೆ. ಹರಿಭಜನೆಯಲ್ಲಾದರೆ, 'ಶ್ರೀಮದ್ ರಮಾರಮಣ' ಎಂದು ಮುಮ್ಮೇಳದವನು ಹೇಳಿದರೆ ಉಳಿದವರು 'ಗೋವಿಂದಾ ಗೋವಿಂದಾ' ಎಂದು ದನಿಗೂಡಿಸುವರು.

ಭಜನೆಯವರು ದೇವಾಲಯದಲ್ಲಿ ದೇವರ ಮುಂದೆ ಅರ್ಧಚಂದ್ರಾಕಾರವಾಗಿ ಕುಳಿತು ಹಾಡುವರು. ಮುಮ್ಮೇಳದವನು ಹಾರ್ಮೋನಿಯಂ ನುಡಿಸುತ್ತಿದ್ದರೆ, ಹಿಮ್ಮೇಳದಲ್ಲಿ ಒಬ್ಬನು ದಮಡಿ ನುಡಿಸುವನು, ಉಳಿದವರು ತಾಳ ಬಾರಿಸುತ್ತ ಹಾಡುವರು.

ನಮ್ಮ ಜಿಲ್ಲೆಯಲ್ಲಿ ಮನಗೂಳಿಯ ಶ್ರೀಮತಿ ಲಕ್ಷ್ಮೀಬಾಯಿ ತಂದಿ ಸಂಗಪ್ಪಮಾದರ ಇವರ ಶ್ರೀ ಸೋಮೇಶ್ವರ ಭಜನಾ ಮಂಡಳಿ (ಈ ಕಲಾವಿದೆಗೆ ೧೯೯೭ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ); ವಿಜಾಪುರದ ಶ್ರೀ ದುಂಡಪ್ಪ ಅವ್ವಣ್ಣಪ್ಪ ಮುತ್ತಗಿ ಭಜನಾ ಸಂಘ (ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯ ೧೯೯೮ರ 'ಪದ್ದಣ್ಣ ಶ್ರಮ ಪ್ರಶಸ್ತಿ' ಬಂದಿದೆ); ಶ್ರೀ ಬಾಳಪ್ಪ ಫಕೀರಪ್ಪ ಕಣಮುಚನಾಳ, ಯೋಗಾದುರ ಶಾಲನಿ ವಿಜಾಪುರ (ಇವರಿಗೆ ದಿನಾಂಕ ೧೩-೧-೨೦೦೦ ದಿಂದ ಕರ್ನಾಟಕ ಸರಕಾರದ ಗೌರವ ಮಾಸಾಶನ ಬರುತ್ತಿದೆ); ಹಳ್ಳೂರದ ಸಿದ್ದಪ್ಪ ಚಂದಪ್ಪ ಪೂಜಾರಿ, ಸಾಲೋಟಗಿ (ತಾ. ಇಂಡಿ)ಯ ಶ್ರೀ ಅರ್ಜುನ ಯಮನಪ್ಪಧರೇನವರ ಭಜನಾ ಸಂಘ- ಇವು ಮುಖ್ಯ ಭಜನಾಮೇಳಗಳಾಗಿರುತ್ತವೆ. ಉಳಿದಂತೆ ವಿಜಾಪುರ ಜಿಲ್ಲೆಯಲ್ಲಿ ಸುಮಾರು ೫೦ರಷ್ಟು ಭಜನಾಮೇಳಗಳು ಇರುವದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರ ಪಟ್ಟಿಯಿಂದ ತಿಳಿದು ಬರುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ಲಾಂಬಾಣಿಗಳ ತಾಂಡೆಗಳು ಬಹಳಷ್ಟು ಇವೆ. ಇವರು ತಮ್ಮ ತಾಂಡೆಗಳಲ್ಲಿ ಲಂಬಾಣೀ ಭಜನೆ ಮಾಡುತ್ತಾರೆ. ಇವರ ಭಾಷೆ ಲಂಬಾಣಿ. ಇದೇ ಭಾಷೆಯಲ್ಲಿ ಒಂದು ವಿಶಿಷ್ಟ ವಾದ್ಯ ನುಡಿಸುತ್ತ ಭಜನೆ ಮಾಡುತ್ತಾರೆ. ಅಂತಹ ಮೇಳಗಳಲ್ಲಿ ಮಶಣಾಪುರದ (ತಾ. ವಿಜಾಪುರ) ಶ್ರೀ ನಾರಾಯಣ ಮಿರ್ಕು ಲಮಾಣಿ ಸಂಘ, ಕೆಸರಾಳ ತಾಂಡೆಯ ಶ್ರೀ

ಅಂಕರ ಮನ್ನು ಲಮಾಣಿ ಸಂಘ, ಸಾಲೋಟಗಿ (ತಾ. ಇಂಡಿ)ಯ ಶ್ರೀ ಗಂಗಾರಾಮ ತುಕಾರಾಮ ರಾಠೋಡ ಸಂಘ; ಮಿಂಚನಾಳ (ತಾ. ವಿಜಾಪುರ)ದ ಶ್ರೀ ರಾಮಸಿಂಗ ಚಂ.ರಾಠೋಡ ಸಂಘ; ಹಲಸಂಗಿ (ತಾ. ಇಂಡಿ)ಯ ಶ್ರೀ ಲಾಲು ಗೋಮ ಚವ್ಹಾಣ ಸಂಘ ಇವನ್ನು ಗಮನಿಸಬೇಕು.

## ವೀರಗಾಸೆ

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ವೀರಶೈವ ಪರಂಪರೆಯ ವಿಶಿಷ್ಟವಾದ ಧಾರ್ಮಿಕ ಕಲೆಗೆ 'ವೀರಗಾಸೆ' ಎಂದು ಹೆಸರು. ಇದನ್ನು ಪುರವಂತಿಕೆ ಎಂದೂ ಈ ಕಲಾವಿದರಿಗೆ ಪುರವಂತರೆಂದು ಕರೆಯುವವರೂ ಉಂಟು. ವೀರಗಾಸೆಯವರು ವೀರಭದ್ರನ ಅವತಾರವೆಂದು ಹೇಳಲಾಗುವದು. ಅವರ ರೌದ್ರಾವತಾರದ ಕುಣಿತದಿಂದ ಈ ನಂಬಿಗೆ ಬಂದಂತಿದೆ.

ಈ ಕಲಾವಿದರ ವೇಷ ಭೂಷಣ ತುಂಬ ವರ್ಣಮಯ ಹಾಗೂ ಆಕರ್ಷಕ. ಕಾವಿಹಾಕಿದ ರೇಶಿಮೆ ದೋತರ ಇಲ್ಲವೆ ಕಾವಿ ಚೂಡಿದಾರ ಪೈಜಾಮ ಉಟ್ಟು, ಕಾವಿಶರ್ಟ ಧರಿಸಿ ನಡುಕಟ್ಟನ್ನು ಕಟ್ಟಿರುತ್ತಾರೆ. ಮೈಮೇಲೆ ಗಲೀಫದಂತಹ ವಸ್ತ್ರವನ್ನು ಹಾಕಿಕೊಂಡಿರುತ್ತಾರೆ. ಈ ವಸ್ತ್ರದ ಅಂಚು ಚುಂಗುಗಳಿಂದ ಅಲಂಕಾರವಾಗಿರುತ್ತದೆ. ತಲೆಗೆ ಕಾವಿಯ ರೇಶಿಮೆ ರುಮಾಲು ಸುತ್ತಿ ತೋಳಿಗೆ ಬೆಳ್ಳಿಯ ನಾಗಮುರಿಗೆ, ಎದೆಗೆ ತೀರ್ಥಮುಖಗಳು, ನಡುವಿಗೆ ರುಂಡಮಾಲೆ, ಕೈಗಳ ಮಣಿಕಟ್ಟಿಗೆ ಹಾಗೂ ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿರುವರು. ಪಕ್ಕದಲ್ಲಿ ಚಿಕ್ಕ ರಕ್ಷಾಜೋಳಿಗೆ, ಹಣೆಗೆ ವಿಭೂತಿ, ಕಾಲಲ್ಲಿ ಗೆಜ್ಜೆಸರ, ಬಲಗೈಯಲ್ಲಿ ಬಡ್ಗ ಇಲ್ಲವೆ ತ್ರಿಶೂಲ ಹಿಡಿದಿದ್ದರೆ, ಎಡಗೈಯಲ್ಲಿ ತುದಿಗೆ ಲಿಂಬೆಹಣ್ಣು ಸಿಕ್ಕಿಸಿದ ಶಸ್ತ್ರಗಳನ್ನು ಹಿಡಿದಿರುತ್ತಾರೆ. ಪಂಚಲೋಹದಿಂದ ಮಾಡಿದ ಇವರ ಕೈಯಲ್ಲಿರುವ ಶಸ್ತ್ರಗಳು ಡಬ್ಬಣದಷ್ಟು ದಪ್ಪವಿದ್ದು ೨ ರಿಂದ ೩ ಅಡಿ ಉದ್ದವಾಗಿರುತ್ತದೆ.

ಈ ಕಲೆ ವೀರಭದ್ರನ ಶೌರ್ಯ, ಶಿವನ ಆಧಿತ್ಯವನ್ನು ಸಾರುವ ದೈವಾರಾಧನೆಯ ಕಲೆಯಾಗಿದೆ. ಈ ಕಲಾವಿದರು ಹೆಚ್ಚಾಗಿ ಪಂಚಾಳ ಸಮಾಜದಿಂದ ಬಂದವರಾಗಿರುವರು.

ವೀರಗಾಸೆ ಹಿನ್ನೆಲೆ ಕುರಿತು ಒಂದು ಪೌರಾಣಿಕ ಕಥೆಯಿದೆ: ದಕ್ಷಬ್ರಹ್ಮನಿಗೂ ಅವನ ಅಳಿಯನಾದ ಶಿವನಿಗೂ ಕಾರಣಾಂತರದಿಂದ ವೈರತ್ವ ಉಂಟಾಗುತ್ತದೆ. ಈ ಕಾರಣದಿಂದಾಗಿ ದಕ್ಷಬ್ರಹ್ಮನು ತಾನು ಕೈಕೊಂಡ ಯಜ್ಞಕ್ಕೆ ದೇವಾನುದೇವತೆಗಳಿಗೆ ಆಮಂತ್ರಣವಿತ್ತು ಶಿವನಿಗೆ ಆಮಂತ್ರಿಸುವದಿಲ್ಲ. ಶಿವನು ಬೇಡವೆಂದರೂ ಕೇಳದೆ ಪಾರ್ವತಿ ತಂದೆಯ ಯಜ್ಞಕ್ಕೆ ಹೋಗುತ್ತಾಳೆ. ಆದರೆ ಅವಳಿಗೆ ಅಲ್ಲಿ ಗೌರವ ಸಿಗುವದೊತ್ತಟ್ಟಿಗಿರಲಿ, ತಂದೆಯಿಂದ ಅಳಿಯನ ನಿಂದೆ ಕೇಳುವ ಪ್ರಸಂಗ ಬರುತ್ತದೆ. ಇದರಿಂದ ಕುಪಿತಳಾದ ಪಾರ್ವತಿ ತಂದೆಗೆ ಶಾಪಹಾಕಿ ಯಜ್ಞಕುಂಡದಲ್ಲಿ ಬಿದ್ದು ಸಾಯುತ್ತಾಳೆ. ಇದನ್ನೆಲ್ಲ ಗಮನಿಸುತ್ತಿದ್ದ ಶಿವನು ಉಗ್ರವಾಗಿ ತಾಂಡವ ನೃತ್ಯ ಮಾಡುತ್ತಿರುವಾಗ ವೀರಭದ್ರನ ಜನನವಾಗುತ್ತದೆ. ವೀರಭದ್ರ ತಂದೆಯ ಆದೇಶವನ್ನು ಹೊತ್ತು, ದಕ್ಷಬ್ರಹ್ಮನ ಯಾಗವನ್ನು ನಾಶಮಾಡಿ ಅವನ ರುಂಡವನ್ನು ಚೆಂಡಾಡುತ್ತಾನೆ. ಯುದ್ಧಕ್ಕೆ ಹೋಗುವಾಗ ಶಿವನು 'ಶರಣು ಬಂದವರನ್ನು ರಕ್ಷಿಸು' ಎಂದು ಹೇಳಿದ ಮಾತನ್ನು ನೆನಸಿಕೊಂಡು ಉತ್ತರ ದಿಕ್ಕಿನಲ್ಲಿ ಮಲಗಿದ ಟಗರಿನ ರುಂಡವನ್ನು ಕತ್ತರಿಸಿ ತಂದು ದಕ್ಷಬ್ರಹ್ಮನ ಮುಂಡಕ್ಕೆ ಜೋಡಿಸಿ ಅವನ ಪ್ರಾಣದಾನ ಮಾಡುತ್ತಾನೆ. ಈ ಸಂದರ್ಭದಲ್ಲಿ ವಿರಭದ್ರನು ತೋರಿದ ಪ್ರತಾಪದ ಪ್ರತೀಕವೇ ಈ ಕಲೆ. ವೀರಗಾಸೆಯವರು ವೀರಭದ್ರನ ಆಧಿಕ್ಯವನ್ನು ಒಡಬುಗಳ ಮೂಲಕ ಹೇಳಿ ಕುಣಿಯಲಾರಂಭಿಸಿ ಕೊನೆಯಲ್ಲಿ ತಮ್ಮ ನಾಲಿಗೆ, ತುಟಿ, ಕೆನ್ನೆ, ಹೊಟ್ಟೆ ಮೊದಲಾದ ಕಡೆ ಶಸ್ತ್ರ ಚುಚ್ಚಿಕೊಳ್ಳುವ ಸಂದರ್ಭ ಅದ್ಭುತವಾಗಿರುತ್ತದೆ. ಈ ಕಲಾವಿದರು ಕುಣಿಯುವಾಗ ಪಕ್ಕದಲ್ಲಿ ಸಂಬಾಳವಾದನ, ಶಹನಾಯಿ, ತಾಳವಾದ್ಯಗಳ ಮೇಳವಿರುತ್ತದೆ. ವಿಜಾಪುರ ಜಿಲ್ಲೆಯಲ್ಲಿ ವೀರಗಾಸೆ ತಂಡಗಳು ಈ ಕೆಳಗಿನಂತಿದೆ :

೧. ಶ್ರೀ ಮನೋಹರ ರಾಚಪ್ಪ ಬಡಿಗೇರ-ಊರು-ಬಿಜ್ಜರಗಿ,ತಾ. ವಿಜಾಪುರ
೨. ಶ್ರೀ ಬಸಪ್ಪ ಮೋನಪ್ಪ ಬಡಿಗೇರ-ಊರು-ಇಂಚಗೇರಿ, ತಾ. ಇಂಡಿ
೩. ಶ್ರೀ ಕಮಲಾಕರ ವಿ. ಪೋದ್ದಾರ-ಊರು-ಇಂಚಗೇರಿ, ತಾ. ಇಂಡಿ
೪. ಶ್ರೀ ಮಲ್ಲಿಕಾರ್ಜುನ ಮೇತ್ರಿ-ಊರು-ಏಳಗಿ, ತಾ. ಇಂಡಿ
೫. ಶ್ರೀ ಸಿದ್ರಾಮಯ್ಯ ಚ. ಹಿರೇಮಠ-ಊರು-ಸವನಳ್ಳಿ, ತಾ. ವಿಜಾಪುರ
೬. ಶ್ರೀ ರಾಮಪ್ಪ ಪಾ. ಬಡಿಗೇರ-ಊರು-ಶಿವಣಗಿ, ಜಿ.ವಿಜಾಪುರ

೭. ಶ್ರೀ ಈರಪ್ಪ ಯ. ಹೆಬ್ಬಾಳ, ಊರು-ಗೊಳಸಂಗಿ, ತಾ. ಬ.ಬಾಗೇವಾಡಿ
೮. ಶ್ರೀ ನಾಗಲಿಂಗಪ್ಪ ಪತ್ತಾರ, ಊರು-ಕೋರವಾರ, ತಾ. ಸಿಂದಗಿ
೯. ಶ್ರೀ ರಾಮಪ್ಪ ಕಾ. ಬಡಿಗೇರ, ಊರು-ಕೋಟ್ಯಾಳ ತಾ.ವಿಜಾಪುರ
೧೦. ಶ್ರೀ ಸಾಯಬಣ್ಣ ಸಿ. ಬೆಸಕನಳ್ಳಿ, ಊರು-ಅಂಜುಟಗಿ ತಾ.ಇಂಡಿ

ಇವರಲ್ಲದೆ ಇನ್ನೂ ಕೆಲವು ಕಲಾವಿದರು ಈ ಜಿಲ್ಲೆಯಲ್ಲಿ ಸಿಗುತ್ತಾರೆ.

## ಗೊಂದಲಿಗರ ಮೇಳ

ಮೂಲತಃ ದೈವಾರಾಧನೆಯ ಕಲೆಯಾಗಿದ್ದ ಗೊಂದಲಹಾಕುವದು ಇಂದು ವೃತ್ತಿಕಲೆಯಾಗಿ ಮಾರ್ಪಾಡುಗೊಂಡಿದೆ. ಇವರ ಮೇಳಕ್ಕೆ ಗೊಂದಲಿಗರಮೇಳ ಎಂದು ಹೆಸರು. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಗೊಂದಲಿಗರು ಕಾಣುತ್ತಾರೆ. ಮೂಲತಃ ಮಹಾರಾಷ್ಟ್ರದವರಾಗಿರುವ ಇವರು ಶಿವಾಜಿಯ ಕಾಲದಲ್ಲಿ ಮುಸ್ಲಿಮರು ಆಳುತ್ತಿದ್ದ ವಿಜಾಪುರಕ್ಕೆ ಗೂಢಚರ್ಯೆಯ ಕಾರ್ಯನಿಮಿತ್ತ ಬಂದರೆಂದೂ ಗೊಂದಲಹಾಕುವ ಕಲೆಯನ್ನು ಇವರು ಗೂಢಚರ್ಯೆಗೆ ಚೆನ್ನಾಗಿ ಬಳಸಿಕೊಂಡರೆಂದೂ ಹೇಳಲಾಗುವದು. ಇವರ ಕುಲದೇವತೆ ಅಂಬಾಭಾವಾನಿ. ಆದರೆ ಕೆಲವು ಕಡೆ ಇವರು ರೇಣುಕಾದೇವಿಯನ್ನು ಪೂಜಿಸುವದುಂಟು.

ಗೊಂದಲಿಗರ ಮೇಳದಲ್ಲಿ ಸಾಮಾನ್ಯವಾಗಿ ಮೂರುಜನ ಕಲಾವಿದರು ಇರುತ್ತಾರೆ. ಇವರಲ್ಲಿ ನಾಯಕನು ತಾಳವನ್ನು ಉಳಿದವರಿಬ್ಬರು ಸಂಬಾಳ ಮತ್ತು ಏಕತಾರಿಯನ್ನು ನುಡಿಸುವರು. ಸಾಮಾನ್ಯವಾಗಿ ನವರಾತ್ರಿಯ ಒಂಬತ್ತು ದಿನಗಳಲ್ಲಿ, ಮದುವೆ ಜಾತ್ರೆ, ಉತ್ಸವ ಮುಗಿದ ಮೇಲೆ ಮತ್ತು ಸುಗ್ಗಿಯ ನಂತರ ಭಕ್ತರು ಗೊಂದಲಹಾಕಿಸುತ್ತಾರೆ. ಇದರಿಂದ ಎಲ್ಲರಿಗೂ ಶುಭವಾಗುವದೆಂಬ ನಂಬಿಗೆಯಿದೆ. ತಲೆಗೆ ಕೆಂಪು ಇಲ್ಲವೆ ಬಿಳಿಯ ರೂಮಾಲು, ದೋತರ, ನಿಲುವಂಗಿ ಮೇಲೆ ಕೋಟು, ಕೊರಳಲ್ಲಿ ಕವಡೆಯ ಸರ, ಕಾಲಲ್ಲಿ ಗೆಜ್ಜೆಸರ ಇವು ಇವರ ವೇಷಭೂಷಣಗಳು.

ಇವರ ಮೇಳಕ್ಕ ಚಿಕ್ಕದೊಂದು ವೇದಿಕೆಯಾದರೆ ಸಾಕು. ಈ ಕಾರ್ಯಕ್ರಮವು ರಾತ್ರಿ ೮-೯ ಗಂಟೆಯಿಂದ ಬೆಳಗಾಗುವವರೆಗೂ ನಡೆಯುತ್ತದೆ. ಗೊಂದಲಿಗರ ಮಾತೃ ಭಾಷೆ ಮರಾಠಿ, ಆದರೂ ಮರಾಠಿ. ಇಲ್ಲವೆ ಕನ್ನಡ

ಹೀಗೆ ಬೇಕಾದ ಭಾಷೆಯಲ್ಲಿ ಮೇಳ ನಡೆಸುತ್ತಾರೆ. ಇವರು ನಳ-ನೀಳರ ಕಥೆ, ಯಲ್ಲಮ್ಮನ ಕಥೆ, ಭೋಜರಾಜನ ಕಥೆ, ಜಯರಾಣಿ ಕಥೆ, ಗುಣಸಾಗರಿಯ ಕಥೆ, ಅಮರಸೇನನ ಕಥೆ, ಬಾಳಾವತಿಯ ಕಥೆ, ಬಲವಂತ-ಬಸವಂತರ ಕಥೆ, ದಶರಥರಾಜನ ಶಾಪದ ಕಥೆ-ಮೊದಲಾದವುಗಳಲ್ಲಿ ಒಂದನ್ನು ರಾಗವಾಗಿ ಹೇಳುತ್ತಾ ನಡುನಡುವೆ ಸ್ವಾರಸ್ಯವಾಗಿ ವಿವರಣೆ ನೀಡುತ್ತಾರೆ. ಮಧ್ಯದಲ್ಲಿ ಉಪಕಥೆಗಳನ್ನು ತಂದು ಕೇಳುಗರಿಗೆ ಬೇಸರವಾಗದಂತೆ-ಮುಖ್ಯಕಥೆಯನ್ನು ಮುಂದುವರಿಸುತ್ತಾರೆ. ಇವರ ಕಥಾನಿರೂಪಣೆಯ ವೈಖರಿ ವಿಶಿಷ್ಟವಾದುದು.



ಈ ಕಲಾವಿದರು ಆರಂಭದಲ್ಲಿ ಗಣಪತಿ ಸ್ತುತಿಯೊಂದಿಗೆ ಕಾರ್ಯಕ್ರಮ ಆರಂಭಿಸುತ್ತಾರೆ. ನಂತರ ದೇವಿಯ ಸ್ತುತಿ ನಡೆಯುತ್ತದೆ. ದೇವಿಯನ್ನು ಕುರಿತು 'ಮಾಯಾ ಜನನಿ ಅಂಬಾ ಜಗದಂಬಿ, ಮಾಯಾ ಜಗದಂಬಿ ವರವನೀಡು ತಾಯಿ' ಎಂದು ಪ್ರಾರ್ಥಿಸುತ್ತಾರೆ. ಬೆಳಗಿನ ೬ ಗಂಟೆಗೆ ಕಥೆ ಮುಗಿಸುವಾಗ ದೇವಿಯ ಕಲಶಕ್ಕೆ ಕಾಯಿ ಒಡೆದು ಕರ್ಪುದಾರತಿ ಬೆಳಗಿ ಮಂಗಳಾಚರಣೆ ಮಾಡಿ, ಯಜಮಾನನ ಕುಟುಂಬಕ್ಕೆ ಅಂಬಾಭವಾನಿ ಒಳಿತು ಮಾಡಲೆಂದು ಹಾರೈಸುತ್ತಾರೆ. ಕೊನೆಯಲ್ಲಿ ಕಥೆ ಕೇಳಲು ಬಂದವರಿಗೆ ಪ್ರಸಾದ ಹಂಚುವರು.

ವಿಜಾಪುರ ಜಿಲ್ಲೆಯ ಗೊಂದಲಿಗರ ಪ್ರಮುಖ ಮೇಳಗಳು ಈ ರೀತಿಯಾಗಿವೆ :

೧. ಶ್ರೀ ಚಂದ್ರಕಾಂತ ಶಿವರಾಮ ಕಾಳೆ
ಗೋಂಧಳಿಗಲ್ಲಿ, ಜೋರಾಮರ ಪೇಟೆ, ವಿಜಾಪುರ
೨. ಶ್ರೀ ಭೀಮಶಿ ರಾ. ಸೂರ್ಯವಂಶಿ
ತಾಲೂಕ ಕಚೇರಿ ಹಿಂದೆ, ಬ.ಬಾಗೇವಾಡಿ.
೩. ಶ್ರೀ ಶಂಕರ ಪು.ಭಿಸೆ, ತೊರವನಾಕು ವಿಜಾಪುರ
೪. ಶ್ರೀ ತುಕಾರಾಮ ವ್ಹಿ, ಭೋಸಲೆ, ಬರಡೋಲ ತಾ. ಇಂಡಿ
೫. ಶ್ರೀ ಬಾಪು. ಮಾ. ಭಿಸೆ, ಹಲಸಂಗಿ ತಾ. ಇಂಡಿ.

## ಚೌಡಿಕೆ

ಚೌಡಿಕೆ ಕಲಾವಿದರು ಸವದತ್ತಿ, ಎಲ್ಲಮ್ಮನ ಭಕ್ತರು, ಇವರಿಗೆ ಎಲ್ಲಮ್ಮನ ಹೆಸರಿನಲ್ಲಿ ದೀಕ್ಷೆಯಾಗಿರುತ್ತದೆ. ಇವರು ಬಳಸುವ ವಾದ್ಯವೇ ಚೌಡಿಕೆ. ಚೌಡಿಕೆ ಹಾಡುಗಳಲ್ಲಿ ಶಕ್ತಿದೇವಿ ಎಲ್ಲಮ್ಮನ ಮಹಿಮೆ, ಅವಳ ಪೂಜೆ, ಜಾತ್ರೆ, ಸವದತ್ತಿಯ ಏಳುಕೊಳ್ಳದ ವರ್ಣನೆ, ಸ್ಥಳಮಹಾತ್ಮೆ, ದೇವಿಯ ಚರಿತ್ರೆ, ಪರಶುರಾಮನ ಮುಗ್ಧಭಕ್ತಿ - ಇತ್ಯಾದಿ ವಿಷಯಗಳು ಕಂಡುಬರುತ್ತದೆ, ಕಿವುಡರ ಮೋಜಿನ ಹಾಡು, ವಿಧಿಲಿಖಿತದಂತಹ ಹಾಡು, ಶಾರದಾಗ ಶಟಗಾರ ಇದ್ದ ಇಂತಹ ಹಾಸ್ಯದ ಹಾಗೂ ಸಮಸ್ಯೆಯ ಹಾಡುಗಳನ್ನು ಇವರು

ಹಾಡುತ್ತಾರೆ. ಇವರ ಹಾಡುಗಳಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ, ಭಕ್ತ ಸಿರಿಯಾಳ, ಯರ್‍ರ್ಯಾರು ಕಡಿಮಿ ಮೊದಲಾದ ಹಾಡುಗಳೂ ಇರುತ್ತವೆ.

ಚೌಡಿಕೆ ಉಗಮದ ಬಗ್ಗೆ ಪ್ರಚಲಿತವಿರುವ ಒಂದು ಕಥೆ ಇಂತಿದೆ: ಜಮದಗ್ನಿಯ ಆಶ್ರಮದಲ್ಲಿದ್ದ ಕಾಮಧೇನು ಪಡೆಯಬೇಕೆಂಬ ಆಸೆಯಿಂದ ಕಾರ್ತವೀರ್ಯನು ಆ ಋಷಿಯನ್ನು ಕೊಂದು ಗೋವನ್ನು ಅಪಹರಿಸುತ್ತಾನೆ. ಋಷಿಪತ್ನಿ ರೇಣುಕೆಯು ದುಃಖಮಾಡುತ್ತಿರುತ್ತಾಳೆ. ಮಗ ಪರಶುರಾಮನು ತಾಯಿಯ ದುಃಖನಿವಾರಣೆ ಮಾಡಲು ಬಯಸಿ ಕಾರ್ತವೀರ್ಯನನ್ನು ಕೊಂದು ಕಾಮಧೇನುವನ್ನು ಮರಳಿಪಡೆಯುತ್ತಾನೆ. ಹಾಗೆ ಕೊಂದ ನಂತರ ಅವರ ಶರೀರದ ಭಾಗಗಳಿಂದ ಚೌಡಿಕೆ ಎಂಬ ವಾದ್ಯವನ್ನು ರಚಿಸಿ ಅದನ್ನು ನುಡಿಸಿ ತಾಯಿಯನ್ನು ಸುಪ್ರೀತಗೊಳಿಸಿದನಂತೆ! ಈ ಕಥೆಯಂತೆ ಕಾರ್ತವೀರ್ಯನ ಹೊಟ್ಟೆಯೇ ಚೌಡಿಕೆಯ ಕೊಳಗ, ಕರುಳೇ ತಂತಿ, ಕೈಯೇ ಸರಿಗೋಲು, ಬೆರಳೇ ಬಾರಿಸುವ ಕಡ್ಡಿ!

ಚೌಡಿಕೆ ಕಲಾವಿದೆಯರಿಗೆ ಜೋಗತಿ ಎಂದು ಹೆಸರು. ಇವರು ಕೆಂಪು, ಹಸಿರು, ಇಲ್ಲವೆ ಹಳದಿ ಸೀರೆಯನ್ನುಟ್ಟು, ಕುಪ್ಪಸ ತೊಟ್ಟು, ಹಣೆತುಂಬ ಕುಂಕುವ ಹಾಗೂ ಭಂಡಾರ ಹಚ್ಚಿಕೊಂಡಿರುವರು. ಕೈತುಂಬ ಹಸಿರು ಬಳೆ ಇರುವವು. ಇವರ ಕಲಾತಂಡದಲ್ಲಿ ಸಾಮಾನ್ಯವಾಗಿ ಮೂವರು ಇರುತ್ತಾರೆ. ಮುಖ್ಯ ಕಲಾವಿದೆ ಚೌಡಿಕೆ ನುಡಿಸುತ್ತ ಹಾಡು ಹೇಳುವಳು. ಉಳಿದವರಲ್ಲಿ ಒಬ್ಬರು ತುಂತುಣಿ, ಇನ್ನೊಬ್ಬರು ತಾಳದೊಂದಿಗೆ ಹಾಡಿಗೆ ದನಿಗೂಡಿಸುವರು. ದೀಕ್ಷೆ ಪಡೆದ ಜೋಗತಿಯರು ಮದುವೆಯಾಗದೆ ದೇವದಾಸಿ ವೃತ್ತಿ ನಡೆಸುವರು. ನಪುಂಸಕರಾದ ಗಂಡಸರೂ ಸ್ತ್ರೀವೇಷ ಧರಿಸಿ ತಲೆಯ ಮೇಲೆ ತಾಮ್ರದ ಬಿಂದಿಗೆ ಹೊತ್ತು ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಕುಣಿಯುವ ದೃಶ್ಯ ಅದ್ಭುತವಾಗಿರುತ್ತದೆ. ಆರಂಭದಲ್ಲಿ ದೈವಾರಾಧನೆಗಾಗಿ ಇದ್ದ ಈ ಕಲೆ ನಂತರ ವೃತ್ತಿಕಲೆಯಾಗಿ ಮಾರ್ಪಟ್ಟುದನ್ನು ಕಾಣುತ್ತೇವೆ. ಈ ಕಲಾತಂಡಗಳಲ್ಲಿ ಪ್ರಮುಖವಾದವುಗಳು ನಮ್ಮ ಜಿಲ್ಲೆಯಲ್ಲಿ ಇಂತಿವೆ :

೧. ಶ್ರೀಮತಿ ಗೌರವ್ವ ಮಾದರ, ತಿಕೋಟಾ. ತಾ.ಜಿ.ವಿಜಾಪುರ ೧೯೯೫ ರಲ್ಲಿ ನಿಧನಳಾಗಿದ್ದಾಳೆ. ಅಪ್ರತಿಮ ಚೌಡಿಕೆ ಕಲಾವಿದೆ.

ಇವಳು ಜಿಲ್ಲಾಮಟ್ಟದ, ರಾಜ್ಯಮಟ್ಟದ, ಅಂತರ್ರಾಜ್ಯಮಟ್ಟದ ಪ್ರಶಸ್ತಿ, ಪುರಸ್ಕಾರ ಪಡೆದಿದ್ದಳು. ಸಾರ್ಕ ಸಮ್ಮೇಳದಲ್ಲಿಯೂ ಈ ಕಲಾತಂಡ ಭಾಗವಹಿಸಿತ್ತು.

೨. ಶ್ರೀಮತಿ ಮಲ್ಲಮ್ಮ ತಂದಿಲಕ್ಷ್ಮಣ ಗುಡಿಮನಿ. ತೊರವಿ. ತಾ. ಜಿ. ವಿಜಾಪುರ, ಅನೇಕ ಪ್ರಶಸ್ತಿ ಪಡೆದ ಕಲಾತಂಡ.

೩. ಶ್ರೀ ಬಸಪ್ಪ ಹುಸನಪ್ಪ ಚೌಡಿಕೇರ, ಹಳ್ಳೂರ ತಾ. ಮುದ್ದೇಬಿಹಾಳ. ಇವನಿಗೆ ೨೦೦೧ ರಿಂದ ಗೌರವ ಮಾಸಾಶನ ಬರುತ್ತಲಿದೆ.

೪. ಶ್ರೀಮತಿ ರತ್ನವ್ವ ಮಾದರ, ಸಾರವಾಡ ತಾ. ವಿಜಾಪುರ.

ಇದಲ್ಲದೆ ಇನ್ನೂ ೮-೧೦ ಕಲಾತಂಡಗಳು ಈ ಜಿಲ್ಲೆಯಲ್ಲಿವೆ. ಇವರೆಲ್ಲರೂ ಹಿಂದುಳಿದ ವರ್ಗದವರಾಗಿರುವರು.

# ೨. ವಾದ್ಯ ಪ್ರಧಾನ ಕಲೆಗಳು

## ಡೊಳ್ಳಿನ ಹಾಡು

ಜನಪದ ಕಲೆಗಳಲ್ಲಿ ಡೊಳ್ಳಿನ ಹಾಡು ಹಾಗೂ ಡೊಳ್ಳಿನ ಕುಣಿತಗಳು 'ಗಂಡುಕಲೆ' ಎಂದೇ ಹೆಸರುಪಡೆದಿವೆ. ಸಾಮಾನ್ಯವಾಗಿ ಕುರುಬರು ಈ ಕಲೆಯಲ್ಲಿ ಪಳಗಿದವರಾಗಿದ್ದಾರೆ. ತಲೆತಲಾಂತರಗಳಿಂದ ದೈವೀ ಆರಾಧನೆಯ ಸಾಧನವಾಗಿ ಬೆಳೆದು ಬಂದ ಈ ಕಲೆ ಇತ್ತೀಚೆಗೆ ಮನರಂಜನೆಯ ಮಾಧ್ಯಮವಾಗಿ ಮನ್ನಣೆಗಳಿಸಿದೆ. ಈ ಕಲಾವಿದರು ಬೀರದೇವರ ಭಕ್ತರು. ನಮ್ಮ ಜಿಲ್ಲೆಯಲ್ಲಿ ಊರೂರಿಗೆ ಡೊಳ್ಳಿನ ಮೇಳಗಳಿವೆ. ಹತ್ತೆಂಟು ಕಲಾವಿದರು ಡೊಳ್ಳಿನೊಂದಿಗೆ ವೃತ್ತಾಕಾರವಾಗಿ ಕುಳಿತು ಮುಮ್ಮೇಳ ಹಿಮ್ಮೇಳವಾಗಿ ಹಾಡುಹಾಡುವರು. ಇವರಲ್ಲಿ ಇಬ್ಬರು ತಾಳವಾದಕರಾಗಿರುತ್ತಾರೆ. ಈ ಮೇಳಗಳು ರಾತ್ರಿ ಹೊತ್ತಿನಲ್ಲಿ ಬೀರದೇವರ ಗುಡಿ ಇಲ್ಲವೆ ಸಮಾಜ ಮಂದಿರದಲ್ಲಿ ಜರುಗುತ್ತವೆ. ಇವರ ಹಾಡುಗಳಲ್ಲಿ ಹಾಲುಮತ ಪುರಾಣ, ಅನುಸೂಯಾ ಪದ, ಮಾರ್ಕಂಡೇಯ ಚರಿತ್ರೆ, ಗಜಾಸುರ, ಬೀರಲಿಂಗೇಶ್ವರ ಪದ, ಮೈಲಾರಲಿಂಗೇಶ್ವರ, ರೇವಣಸಿದ್ದೇಶ್ವರ, ಶರಣರ ಚರಿತ್ರೆ, ಹುಲಜಂತಿ

ಮಾಳಿಂಗರಾಯ ಚರಿತ್ರೆ ಮೊದಲಾದವುಗಳು ಸಮಾವೇಶವಾಗುತ್ತವೆ. 'ದಿಳ್ಳಿಗೆ ಹೋದರೂ ಡೊಳ್ಳಿಗೆ ಒಂದೇ ಪೆಟ್ಟು' ಎಂಬ ಗಾದೆಯಿದೆ. ಡೊಳ್ಳು ಬಾರಿಸುವಾಗ ಬಲಗೈಯಲ್ಲಿ ಮಾತ್ರ ಗುಣೀ ಇರುತ್ತದೆ. ಒಮ್ಮೆ ಗುಡಿಯಿಂದ ಬಲದ ಡೊಳ್ಳಿಗೆ ಬಾರಿಸಿ ಎಡಗೈಯಿಂದ ಡೊಳ್ಳಿನ ಎಡಭಾಗಕ್ಕೆ ಬಡಿದರೆ 'ಬ್ರಹ್ಮ ದೊಡ್ಡಾಂದ್' ಎಂಬ ನಾದ ಹೊರಡುತ್ತದೆ.

ಜಾತ್ರೆ, ಹಬ್ಬಗಳು, ಮಣ್ಯಾಪುರುಷರ ಮೆರವಣಿಗೆಗಳಲ್ಲಿ ಡೊಳ್ಳಿನವರು ಭಾಗವಹಿಸಿ ಕಲಾಸೇವೆ ಮಾಡುತ್ತಾರೆ. ಹಾಡಿನ ಆರಂಭದಲ್ಲಿ-

ಸ್ವಾಮಿ ನಮ್ಮ್ಯಾ ದೇವಾರು ಬಂದಾರ ಬನ್ನಿರೋ
ದೇವ ನಮ್ಮ್ಯಾ ದೇವಾರು ಬಂದಾರು ಬನ್ನಿರೋ -

ಎಂದು ಹಾಡುವದು ವಾಡಿಕೆ.

ವಿಜಾಪುರ ಜಿಲ್ಲೆಯಲ್ಲಿರುವ ಪ್ರಸಿದ್ಧ ಡೊಳ್ಳಿನ ಹಾಡಿನ ಮೇಳಗಳು ಇಂತಿವೆ:

೧. ಶ್ರೀ ಚಂದ್ರಾಮ ಭೀಮಣ್ಣ ಪೂಜಾರಿ. ಹಾವಿನಹಾಳ ತಾ. ಇಂಡಿ. ವಯಸ್ಸು ೭೫. ಇವರಿಗೆ ೧-೧-೧೯೮೯ ರಿಂದ ಗೌರವ ಮಾಸಾಶನ ದೊರೆಯುತ್ತಿದೆ. ಶ್ರೇಷ್ಠ ಕವಿ, ಹಾಡುಗಾರ, ಡೊಳ್ಳುವಾದಕ.

೨. ಶ್ರೀ ಸೋಮಲಿಂಗ ದುಂಡಪ್ಪ ಧನಗೊಂಡ. ಬಿಜ್ಜರಗಿ ತಾ. ವಿಜಾಪುರ. ೧-೮-೨೦೦೫ ರಿಂದ ಗೌರವ ಮಾಸಾಶನ ಬರುತ್ತಿದೆ. ಈ ತಂಡದ ಶ್ರೀ ಮಾಳು ಹಾಗೂ ಶ್ರೀ ಪರಸಪ್ಪ ಇವರೂ ಮಾಸಾಶನ ಪಡೆಯುತ್ತಿದ್ದಾರೆ.

೩. ಶ್ರೀ ತುಕಾರಾಮ ಯಂಕಪ್ಪ ಲಂಗೋಟಿ. ಬಿಜ್ಜರಗಿ ತಾ. ವಿಜಾಪರ ಇವರೂ ೧-೮-೨೦೦೫ ರಿಂದ ಮಾಸಾಶನ ಪಡೆಯುತ್ತಿದ್ದಾರೆ. ಇವರು ಕವಿಯೂ ಆಗಿದ್ದಾರೆ.

೪. ಶ್ರೀ ಸುರೇಶ ರಾಮಚಂದ್ರ ಜೋಶಿ. ನಿಡೋಣಿ ತಾ. ವಿಜಾಪುರ ಇವರು ೧೩-೧೨-೨೦೦೦ ದಿಂದ ಮಾಸಾಶನ ಪಡೆಯುತ್ತಿದ್ದಾರೆ.



೫. ಶ್ರೀ ಲಕ್ಷ್ಮಣ ಶರಣಪ್ಪ ಪೂಜಾರಿ. ಮುತ್ತಗಿ ತಾ. ಬ. ಬಾಗೇವಾಡಿ

೬. ಶ್ರೀಶೈಲ ಬಾಲಪ್ಪ ಬೊಮ್ಮಣಗಿ ಇಂಗಳೇಶ್ವರ ತಾ. ಬ. ಬಾಗೇವಾಡಿ.

ಇವರಲ್ಲದೆ ನಮ್ಮ ಜಲ್ಲೆಯಲ್ಲಿ ಇನ್ನೂ ಐವತ್ತುರಷ್ಟು ಡೊಳ್ಳಿನ ಹಾಡಿನ ಮೇಳಗಳಿವೆ. ಈ ಮೇಳಗಳಲ್ಲಿ ವಾದ್ಯವೇ ಹಾಡಿಗಿಂತ ಪ್ರಧಾನವಾಗಿದೆ.

## ಚಿಟ್ಟಲಗಿ ಮೇಳ

ಇದೊಂದು ನಮ್ಮ ಜಿಲ್ಲೆಯ ವಿಶಿಷ್ಟ ಜಾನಪದ ಕಲೆಯಾಗಿದೆ. ಈ ಮೇಳದಲ್ಲಿ ೫ ರಿಂದ ೬ ಜನ ಕಲಾವಿದರಿರುವರು. ಒಬ್ಬರು ಚಿಟ್ಟಲಗಿ, ಇಬ್ಬರು ತಾಳದವರು, ಸನಾದಿ ಮತ್ತು ಶ್ರುತಿ ಕೂಡಿ ಇಬ್ಬರು-ಹೀಗೆ ಇರುವದು ವಾಡಿಕೆ.

೧. ಶ್ರೀ ಬಸವರಾಜ ಭೀಮಶ್ಯಾ ಹೂಗಾರ. ತಾಂಬಾ ತಾ. ಇಂಡಿ. ಮತ್ತು ಈ ಜಿಲ್ಲೆಯಲ್ಲಿ ಇನ್ನೂ ೭-೮ ಕಲಾತಂಡಗಳಿವೆ.

## ಸಂಬಾಳವಾದನ ಮೇಳ

ನಮ್ಮ ಜಿಲ್ಲೆಯಲ್ಲಿ ಇದೊಂದು ಅಪರೂಪದ ಕಲೆ. ಈ ಕಲಾತಂಡದಲ್ಲಿ ಎಂಟು ಜನರಿರುವರು. ಇವರಲ್ಲಿ ಒಬ್ಬರು ಸಂಬಾಳ ವಾದ್ಯದವರು, ಇಬ್ಬರು ದಿಮ್ಮಕಲಾವಿದರು, ಇಬ್ಬರು ತಾಳ ವಾದ್ಯದವರು, ಇಬ್ಬರು ಶಹನಾಯಿಯವರು, ಒಬ್ಬರು ಶ್ರುತಿ ಕಲಾವಿದರು ಇರುವರು. ಮದುವೆ, ಉತ್ಸವ, ದೇವಕಾರ್ಯ, ಗುಗ್ಗಳ ಮೊದಲಾದ ಕಾರ್ಯಗಳಲ್ಲಿ ಸಂಬಾಳ ವಾದನ ಕಲೆಗೆ ಆಮಂತ್ರಣವಿರುವದು. ಇದೊಂದು ಶಾಸ್ತ್ರೋಕ್ತ ವಾದ್ಯಪ್ರಧಾನ ಕಲೆಯಾಗಿದೆ. ಈ ಕಲಾ ಮೇಳಗಳು ವಿಜಾಪುರ ಜಿಲ್ಲೆಯಲ್ಲಿ ಕಡಿಮೆಸಂಖ್ಯೆಯಲ್ಲಿವೆ. ಅವುಗಳಲ್ಲಿ:

೧. ಶ್ರೀ ವಿಠೋಬಾ ರಾಮಚಂದ್ರ ಪೂಜಾರಿ.

ಸಾವಳಸಂಗ ತಾ. ಇಂಡಿ. ಶ್ರೀ ವಿಠೋಬಾ ಅವರ ತಂದೆ ರಾಷ್ಟ್ರಮಟ್ಟದ ಶ್ರೇಷ್ಠ ಕಲಾವಿದರಾಗಿದ್ದರು.



೨. ಶ್ರೀ ರಾಮಪ್ಪ ಸಾಬು ಬಜಂತ್ರಿ, ಕಾಖಂಡಕಿ ತಾ. ಜಿ. ವಿಜಾಪುರ

೩. ಶ್ರೀ ಕಲ್ಲಪ್ಪ ವೀರಭದ್ರಪ್ಪ ಹೂಗಾರ, ಮುಳವಾಡ ತಾ. ಬ.ಬಾಗೇವಾಡಿ

೪. ಶ್ರೀ ಹಣಮಂತ ಗೋವಿಂದಪ್ಪ ಹೂಗಾರ.
ಹಂಡರಗಲ್ಲ ತಾ. ಮುದ್ದೇಬಿಹಾಳ

೫. ಶ್ರೀ ಭೀಮಪ್ಪ ಹೂಗಾರ, ಹತ್ತರಕಿಹಾಳ ತಾ. ಬ. ಬಾಗೇವಾಡಿ

೬. ಶ್ರೀ ಅರವಿಂದ ಶ. ಹೂಗಾರ, ನಾಗಠಾಣ ತಾ. ವಿಜಾಪುರ

೭. ಶ್ರೀ ಸಾಬು ಬಸಪ್ಪ ಕೊರವೇರ, ನಾಗೂರ ತಾ. ಬ. ಬಾಗೇವಾಡಿ.

## ಕರಡಿ ಮಜಲು

ಸಾಮಾನ್ಯವಾಗಿ ಗಂಡುದೇವರ ಉತ್ಸವಾದಿಗಳಲ್ಲಿ ಈ ಮೇಳ ನಡೆಯುತ್ತದೆ. ಹಾಗೆಯೇ ಜಾತ್ರೆ, ಧಾರ್ಮಿಕ ಗುರುಗಳ ಮೆರವಣಿಗೆಯಲ್ಲಿ ಕರಡಿಮಜಲು ಬೇಕೇಬೇಕು. ಕರಡಿವಾದ್ಯದ ಜೊತೆಗೆ ಸನಾದಿ, ಶೃತಿ, ತಾಳಗಳನ್ನು ಬಳಸಿದರೆ ಇನ್ನೂ ಕೆಲವು ಕಡೆ ದಿಮ್ಮು, ಚಾಗಡಗಲನ್ನು ಬಳಸುವರು. ಈ ಮೇಳದ ಕಲಾವಿದರು ಕಚ್ಚೆ ಪಂಚೆ ಇಲ್ಲವೆ ದೋತರವನ್ನುಟ್ಟು ಕಸೆಅಂಗಿಧರಿಸಿ, ತಲೆಗೆ ಪೇಟ ಸುತ್ತಿಕೊಳ್ಳುವರು. ಹಣೆಗೆ ವಿಭೂತಿ ಹಚ್ಚಿಕೊಂಡು ನಡುವಿಗೆ ಕೆಂಪು ಇಲ್ಲವೆ ಬಿಳಿ ವಸ್ತ್ರವನ್ನು ಕಟ್ಟಿಕೊಳ್ಳುವರು. ನಂದಿ ಧ್ವಜದ ಕುಣಿತಕ್ಕೆ ಕರಡಿಮಜಲು ಅತೀ ಅವಶ್ಯ. ಕರಡಿಮಜಲು ಬಡಿತದಲ್ಲಿ ಆದಿತಾಳ, ಏಕತಾಳ, ಜಂಪೆತಾಳ, ಚೌತಾಳ, ದೃವತಾಳ, ಚಾಲು ಬಾರಿಸುವದು, ಸಂಕೀರ್ಣತಾಳ ಮೊದಲಾದ ಪ್ರಕಾರಗಳಿವೆ. ಈ ಕಲಾವಿದರು ಅರ್ಧವೃತ್ತಾಕಾರವಾಗಿ ನಿಂತು ಹಾವಭಾವದೊಂದಿಗೆ ವಾದ್ಯ ನುಡಿಸುವ ರೀತಿ ಅದ್ಭುತವಾಗಿರುತ್ತದೆ. ನಿಧಾನವಾಗಿ ಪ್ರಾರಂಭವಾದ ಕರಡಿಮಜಲಿನ ಗತ್ತು– ಗತಿಗಳು ಹಂತಹಂತವಾಗಿ ಮೇಲೇರುತ್ತ ಮತ್ತೆ ನಿಧಾನವಾಗಿ ಮುಕ್ತಾಯವಾಗುವದು. ಈ ಕಲಾ ತಂಡದಲ್ಲಿ ಒಬ್ಬರು ಕರಡಿವಾದಕರು, ಇಬ್ಬರು ದಿಮ್ಮ ಕಲಾವಿದರು , ಇಬ್ಬರು ತಾಳ ವಾದಕರು, ಇಬ್ಬರು ಸನಾದಿಯವರು, ಒಬ್ಬರು ಶೃತಿಯವರು ಹೀಗೆ ೮ ಜನ ಕಲಾವಿದರಿರುವರು. ನಮ್ಮ ಜಿಲ್ಲೆಯಲ್ಲಿ ಕರಡಿಮಜಲಿನ ಮುಖ್ಯ ಕಲಾತಂಡಗಳು ಇಂತಿವೆ :

೧. ಶ್ರೀ ಚಂದ್ರಶೇಖರ ಈಶಪ್ಪ ಹಾದಿಮನಿ.
ಮುತ್ತಗಿ ತಾ. ಬ. ಬಾಗೇವಾಡಿ. ಇವರಿಗೆ ತಾ. ೮-೩-೨೦೦೧ ರಿಂದ ಕರ್ನಾಟಕ ಸರಕಾರದ ಗೌರವ ಮಾಸಾಶನ ದೊರೆಯುತ್ತಿದೆ.

೨. ಶ್ರೀ ಸಿದ್ದಪ್ಪ ಹನುಮಂತಪ್ಪ ಹೂಗಾರ
ಹಂಡರಗಲ್ಲ ತಾ. ಮುದ್ದೇಬಿಹಾಳ

೩. ಶ್ರೀ ಯಂಕಪ್ಪ ಗದಿಗಪ್ಪ ಪೂಜಾರಿ, ದೇವಾಪುರ ತಾ. ವಿಜಾಪುರ

೪. ಶ್ರೀ ಮಲಕಾರಿ. ಸಂಗಪ್ಪ ಕಟಗೇರಿ, ಗೋಡಿಹಾಳ ತಾ. ಇಂಡಿ.

# ೩. ಗೀತಪ್ರಧಾನ ಕಲೆಗಳು

## ಹಂತಿ ಹಾಡು

ಕೃಷಿಕರು ರಾಸಿ ಮಾಡುವಾಗ ಹಂತಿಯಕಾಲಕ್ಕೆ ಬೆಳ್ಳಂಬೆಳತನ ಹಾಡುವ ಹಾಡುಗಳು ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟಿವೆ. ಈ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ನಾಲ್ಕು ಜನ ಕಲಾವಿದರು ಕೋಲ್ಲಾಪುರದಲ್ಲಿ ಇದ್ದು ಅವರ ಹೆಸರು ಇಂತಿದೆ:

೧) ಶ್ರೀ ಪರಪ್ಪಸಂಗಪ್ಪ ಗಣಿ

೨) ಶ್ರೀ ಮುರಿಗೆಪ್ಪ ಸಾಬಣ್ಣ ಬೆಳ್ಳುಬ್ಬಿ

೩) ಶ್ರೀ ಬಸಪ್ಪ ಮಲ್ಲಪ್ಪ ಕೋಲಕಾರ

೪) ಶ್ರೀ ನಾಗಪ್ಪ ಮಲ್ಲಪ್ಪ ಕೋಲಕಾರ. ಇವರೆಲ್ಲರೂ ಸುಮಾರು ೬೫ರ ಆಸುಪಾಸಿನ ವಯಸ್ಸಿನವರು. ಕರ್ನಾಟಕ ಸರಕಾರದಿಂದ ಈ ನಾಲ್ವರೂ ಕಲಾವಿದರ ಗೌರವ ಮಾಸಾಶನ ಪಡೆಯುತ್ತಿದ್ದಾರೆ. ಈಗ ಹಂತಿಗಳು ಕಣ್ಮರೆಯಾಗಿವೆ. ಆದರೆ ಹಂತಿ ಹಾಡುಗಳನ್ನು ಹಾಡುವ ಅಧಿಕೃತ ಕಲಾತಂಡ ಇವರದಾಗಿದೆ. ಇವರು 'ಶ್ರೀ ಬಸವೇಶ್ವರ ಹಂತಿ ಹಾಡುಗಳ ಸಂಘ' ಕಟ್ಟಿಕೊಂಡು ಕಳೆದ ಐದು ದಶಕಗಳಿಂದ ಕಲಾಸೇವೆ ಮಾಡುತ್ತ ಬಂದಿದ್ದಾರೆ. ಇವರೆಲ್ಲ ಅಶಿಕ್ಷಿತರು. ಆದರೆ ಇವರ ಸ್ಮರಣ ಶಕ್ತಿ ಅದ್ಭುತವಾದುದು. ಇವರು ಹಾಡುವ ಹಾಡುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ:

೧) ಎದ್ದಾನೊ ಮಳಿರಾಜಾ ಬಿದ್ದಾನ ಭೂಮಿಯ ಮ್ಯಾಲ-ಸುಗ್ಗಿಯ ಹಾಡು
೨) ಹಂತಿಯ ಕಟ್ಟುತಲಿ ಎಂಥವನ ನೆನೆಯಲಿ-ಹಂತಿ ಹಾಡು
೩) ಕೌರವರು ಪಾಂಡವರು ಓಂ ನಾಮ ಕಲಿತಾರ
ಮಹಾಭಾರತ ಹಾಡು
೪) ಬರುವಾಗ ಏನೇನ ತಂದಿ, ಬರಿಗೈಲಿ ನೀ ಬಂದಿ
ಅಧ್ಯಾತ್ಮ ಹಾಡು
೫) ಕಿತ್ತೂರ ದೇಶಗತಿ ಉತ್ತಮ ಮನೆತನ (ಇತಿಹಾಸ)
೬) ತಾಯವ್ವ ಕಟ್ಟಿದ ಬುತ್ತಿ ನಾ ಎಲ್ಲಿ ಬಿಚ್ಚಲಿ, ಜನಪದ
೭) ಖಾದಿಯ ಉಟ್ಟಾರ ಖಾದಿಯ ತೊಟ್ಟಾರ-ಗಾಂಧೀಜಿ ಹಾಡು
೮) ಆಲಮಟ್ಟಿಯ ಮುಂದ ಅಡ್ಡಗಟ್ಟ್ಯಾರ ಡ್ಯಾಮ
ಆಲಮಟ್ಟಿ ಅಣೆಕಟ್ಟು
೯) ಚೆಂದಕ ಚಂದರಗಿರಯ ಒಳಗೆ ಸೇದುವ ಭಾಂವಿ
ಆಲಮಟ್ಟಿ ಚಂದ್ರಮ್ಮ



೧೦) ಕಪ್ಪಡಿ ಸಂಗಮನಾಥ ಮುಪ್ಪಿಲೆ ಹಿರಿಯಾಂವ
ಕಪ್ಪಡಿ ಸಂಗಮನಾಥ

೧೧) ಪಂಡರಪುರ ನೋಡ ಪಗಡಿ ಬಾಜಾರ ನೋಡ
ಪಂಡರಪುರದ ಹಾಡು

೧೨) ಬಾಗೋಡಿ ಬಸವಣ್ಣನ ಗುಡಿಯಾರು ಕಟ್ಟಿಸ್ಯಾರ
ಬಾಗೇವಾಡಿ ಬಸವಣ್ಣ

೧೩) ಗೋಲಗೇರಿ ಎಂಬುದು ಗೊಲ್ಲಾಳನ ಕುರಿಹಟ್ಟಿ
ಗೋಲಗೇರಿ ಗೊಲ್ಲಾಳ

೧೪) ಪರವುತ ಅಂಬೂದು ಅರವತ್ತು ಗಾವುದ–ಶ್ರೀಗಿರಿ ಹಾಡು

೧೫) ಯಲ್ಲಮ್ಮ ಇರುವದು ಸುತ್ತ ಏಳು ಕೊಳ್ಳ
ಯಲ್ಲಮ್ಮನ ಏಲಿರಾಮ, (ಸವದತ್ತಿ ಯಲ್ಲಮ್ಮ)

ಹೀಗೆಯೇ ಇವರ ಪದಗಳ ಭಾಂಡಾರ ಬಹಳ ದೊಡ್ಡದು. ಇವರು ಹಾಡತೊಡಗಿದರೆ ರಾತ್ರಿ ಗತಿಸಿದ್ದೇ ಗೊತ್ತಾಗುದಿಲ್ಲ. ಈ ಕಲಾತಂಡಕ್ಕೆ ಸಾಕಷ್ಟು ಪ್ರಶಸ್ತಿಗಳು ಬಂದಿವೆ, ಮಾನಸನ್ಮಾನಗಳು ಆಗಿವೆ. ಈ ಕಲಾವಿದರು ಹಂತಿಯ ಹಾಡುಗಳನ್ನಲ್ಲದೆ ಭಜನಾ ಹಾಡುಗಳನ್ನೂ ಸುಶ್ರಾವ್ಯವಾಗಿ ಹಾಡುತ್ತಾರೆ.

## ಕಂಬಿಯ ಹಾಡು

ಶ್ರೀಶೈಲ ಯಾತ್ರೆಗೆ ಕಂಬಿ (ಕಾವಡಿ) ಯೊಂದಿಗೆ ಮೇಳವಾಗಿ ಸಾಗುವ ಭಕ್ತರು ಹಾಡುವ ಹಾಡುಗಳಿಗೆ ಕಂಬಿ ಹಾಡುಗಳೆಂದು ಹೆಸರಿದೆ. ಈ ಹಾಡುಗಳು ಜನಪದ ಸಾಹಿತ್ಯದ ಒಂದು ಪ್ರಕಾರವೆಂದು ಪರಿಗಣಿಸಲಾಗಿದೆ. ಈ ಹಾಡಿನ ಕಲಾವಿದರು ನಮ್ಮ ಭಾಗದಲ್ಲಿ ಅಲ್ಲಲ್ಲಿ ಕಂಡುಬರುತ್ತಾರೆ.

ಶ್ರೀಶೈಲದಲ್ಲಿ ಶ್ರೀ ಮಲ್ಲಿಕಾರ್ಜುನ ಲಿಂಗವಿದೆ. ಇದು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು. ಶ್ರೀಶೈಲ ಮಲ್ಲಿಕಾರ್ಜುನನ ಜಾತ್ರೆಯು ವರ್ಷದಲ್ಲಿ ಶಿವರಾತ್ರಿಗೊಮ್ಮೆ ಹಾಗೂ ಯುಗಾದಿಗೊಮ್ಮೆ ಹೀಗೆ ಎರಡುಸಾರೆ ಆಗುವದು. ಆಗ ಲಕ್ಷಗಟ್ಟಲೆ ಜನರು ಸೇರುವರು. ಆಗ ವಿಜಾಪುರ ಜಿಲ್ಲೆಯ ಭಕ್ತರು ಪಾದಚಾರಿಗಳಾಗಿ ಕಂಬಿ ಹೊತ್ತು ಹಾಡುತ್ತ ಹೋಗುವರು. 'ಶ್ರೀ'

ಎಂಬ ಶಬ್ದದಲ್ಲಿ ಶಮೆ,ದಮೆ, ಶಾಂತಿ, ತಿತಿಕ್ಷೆ, ಉಪರತಿ, ಶ್ರದ್ಧಾ, ಸಮಾಧಾನ- ಈ ಗುಣಗಳೆಲ್ಲ ತುಂಬಿಕೊಂಡಿವೆ. ಇಲ್ಲಿ ಕಾಲಿಡುತ್ತಲೇ ಭಕ್ತರಲ್ಲಿ ಈ ಗುಣಗಳು ತಾನಾಗಿಯೇ ಉಂಟಾಗುತ್ತದೆ. ಯಾಕೆಂದರೆ ಇದು ಋಷಿಗಳ ತಪೋಭೂಮಿ. ಇಲ್ಲಿ ಯೋಗಿಗಳು, ಸಿದ್ಧರು, ಸಾಧ್ಯರು, ಶರಣ-ಶರಣೆಯರು ನೆಲೆಸಿದ್ದ ಸ್ಮಾರಕಗಳಿವೆ; ಗವಿಗಳಿವೆ. ಶ್ರೀಶೈಲದಲ್ಲಿ ಮಹಾನಂದಾ, ವೀರಭದ್ರದೇವಾಲಯ, ಅಂಬಲಹಳ್ಳ, ಭೀಮನಕೊಳ್ಳ, ಗಂಗನಪಲ್ಲಿ, ಸಿದ್ಧರಾಮನಕೊಳ್ಳ, ಭ್ರಮರಾಂಬಾ ಗುಡಿ, ವಿಭೂತಿಮಠ, ರುದ್ರಾಕ್ಷಿಮಠ ಮೊದಲಾದ ಪವಿತ್ರ ಸ್ಥಾನಗಳಿವೆ. ಅಕ್ಕಮಹಾದೇವಿ ಐಕ್ಯಳಾದ ಕದಳಿವನವೂ ಇಲ್ಲಿಗೆ ಸಮೀಪದಲ್ಲಿದೆ.

ಕಂಬಿಯ ಮುಖ್ಯಹಾಡು ನಲವತ್ತೆರಡು ದ್ವಿಪದಿಗಳಲ್ಲಿ ರಚನೆಗೊಂಡುದಾಗಿದೆ. ಇದರ ಒಂದೆರಡು ಪದ್ಯಗಳು:

ಮಲ್ಲಯ್ಯ ಮಲ್ಲಯ್ಯ ಶ್ರೀಗಿರಿ ಮಲ್ಲಯ್ಯನ ನೋಡಲು ಬನ್ನಿ।
ಎಲ್ಲಾ ದೇವರಿಗೆ ಒಡೆಯಾ ಬಲ್ಲಿದ ನಮ್ಮ ಚೆನ್ನಮಲ್ಲ ॥೧॥
ಅನ್ನದಾನಿ ಬಹುಳಮಲ್ಲ ಚಿನ್ನದ ಗುಡಿ ಚೆನ್ನಮಲ್ಲ ।
ಎಲ್ಲಿ ನೋಡಿದರ ತಾನಲ್ಲ ನಂಬಿದ ಭಕ್ತರಿಗ್ಹಾನಲ್ಲ ॥೨॥

ಹೀಗೆ ಈ ಹಾಡಿನಲ್ಲಿ ಶರಣರ ಸಂತರ ವರ್ಣನೆ, ಮಲ್ಲಿಕಾರ್ಜುನನ ಮಹಿಮೆ ಇವು ಮನಂಬುಗುವಂತೆ ಚಿತ್ರಿತವಾಗಿವೆ. ಉರ್ದುಮಿಶ್ರಿತ ಕಂಬಿಯ ಹಾಡುಗಳೂ ಇವೆ.

ಈ ಎಲ್ಲ ಹಾಡುಗಳನ್ನು ಕಲಾವಿದ ಶ್ರೀ ವ್ಹಿ. ಜಿ. ಹಿರೇಮಠ ಎಂಬವರು ಚೆನ್ನಾಗಿ ಹಾಡುತ್ತಾರೆ. ವಿಜಾಪುರ ಜಿಲ್ಲೆಯಲ್ಲಿ ಕಂಬಿಹಾಡುಗಳನ್ನು ಹಾಡುವ ಅನೇಕ ಕಲಾವಿದರಿದ್ದಾರೆ. ಆದರೆ ಪೂರ್ಣಹಾಡು ಹಾಡುವವರು ವಿರಳ.

## ಗೀಗೀ ಹಾಡು

ಉತ್ತರ ಕರ್ನಾಟಕದ ಜನಪ್ರಿಯ ಕಲೆ 'ಗೀಗೀಹಾಡು'. ಹಾಡಿನ ಪ್ರತಿ ಸಾಲಿನ ಕೊನೆಯಲ್ಲೂ 'ಗೀಯ ಗೀಯ ಗೀಯ' ಎಂದು ಬರುವದರಿಂದ ಇವಕ್ಕೆ ಗೀಗೀಹಾಡು ಎಂಬ ಹೆಸರು ಬಂದಿದೆ.

ಗೀಗೀ ಮೇಳದವರು ಈ ಹಾಡುಗಳ ಮೂಲಕ ಜನರಿಗೆ ಧರ್ಮ, ತತ್ವ ಮತ್ತು ನೀತಿ ಬೋಧನೆ ಮಾಡುತ್ತಾರೆ. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮೊದಲಾದ ಇತಿಹಾಸದ ನೂರಾರು ಕಥೆಗಳನ್ನು ವಿವಿಧ ಮಟ್ಟಗಳಲ್ಲಿ ಹಾಡುವ ಈ ಕಲಾವಿದರು, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಎಷ್ಟೋ ಹಾಡುಗಳನ್ನು ಹಾಡುತ್ತಾರೆ. ಇಷ್ಟೇ ಅಲ್ಲ, ಸಮಕಾಲೀನ ಜೀವನದ ರೀತಿ ನೀತಿಗಳ ಬಗೆಗೂ ಸ್ವಾರಸ್ಯವಾದ ಪದಗಳನ್ನು ಕಟ್ಟಿ ಹಾಡುತ್ತಾರೆ. ಗೀಗೀ ಪದಗಳಲ್ಲಿ ದೀರ್ಘ ಹಾಡುಗಳಿಗಿಂತ ಚಿಕ್ಕಪದಗಳೇ ಹೆಚ್ಚು.



'ಗೀಗೀಮೇಳ'ದಲ್ಲಿ ಸಾಮಾನ್ಯವಾಗಿ ಮೂರು ಜನ ಕಲಾವಿದರಿರುತ್ತಾರೆ. ಇವರು ದೋತರ, ಶರ್ಟ ಧರಿಸಿ ಮೇಲೆ ಜಾಕೀಟು ಧರಿಸಿರುತ್ತಾರೆ. ತಲೆಯಮೇಲೆ ಗಾಂಧಿ ಟೊಪ್ಪಿಗೆ ಇರುವುದುವಾಡಿಕೆ. ಇವರು ಧರಿಸುವ ವಸ್ತ್ರಗಳೆಲ್ಲ ಖಾದಿಯವು. ಮೇಳದ ಮುಖ್ಯಸ್ಥ ಡಪ್ಪುಬಾರಿಸುತ್ತ ಮುಮ್ಮೇಳದಲ್ಲಿ ಹಾಡುವನು. ಉಳಿದ ಇಬ್ಬರಲ್ಲಿ ಒಬ್ಬರು ತುಂತುಣೆ ಇನ್ನೊಬ್ಬರು ತಾಳವಾದ್ಯದವರಿದ್ದು ಇವರು ಹಿಮ್ಮೇಳವಾಗಿ ಹಾಡುತ್ತ ಗೀಯ ಗೀಯ

ಗೀಯ ಎಂಬ ಸೊಲ್ಲುಹೇಳುವರು. ಇತ್ತೀಚಿಗೆ ಈ ಮೇಳದಲ್ಲಿ ಪಿಟೀಲು ವಾದ್ಯದವನೊಬ್ಬ ಸೇರಿ ಮೇಳದ ಸಂಖ್ಯೆ ನಾಲ್ಕಕ್ಕೆ ಏರಿದೆ. ಹಾಡಿನ ಮಧ್ಯೆ ಮುಖ್ಯ ಗಾಯಕನನ್ನು ಪ್ರಚೋದಿಸಿಲು 'ಹಾಂ, ಹೇಳಪಾ, ಅವರೇನಂದ್ರು' ಎಂಬಿತ್ಯಾದಿ ಮಾತುಗಳನ್ನು ಬಳಸುತ್ತಾರೆ.

ಗೀಗೀ ಹಾಡುಗಾರರು ಸಾಮಾನ್ಯವಾಗಿ ಆಶುಕವಿಗಳು. ವೇದಿಕೆಯಲ್ಲಿ ನಿಂತಿರುವಾಗಲೇ ಕಣ್ಣಿಗೆ ಕಂಡದ್ದನ್ನು ಹಾಡುಕಟ್ಟಿ ಹಾಡುವ ಕಲೆ ಅವರಲ್ಲಿರುತ್ತದೆ. ಇವರ ಹಾಡುಗಳಲ್ಲಿ ಬರುವ ಪ್ರಾಸ, ಪದಗಳ ಬಿನ್ನಾಣ, ದ್ವಂದ್ವಾರ್ಥ ಎಲ್ಲವೂ ಸ್ವಾರಸ್ಯಕರವಾಗಿರುತ್ತವೆ. ಪ್ರತಿಯೊಂದು ಹಾಡಿಗೆ ಅನುಗುಣವಾಗಿ ಅವರ ಮುಖಭಾವದಲ್ಲಿ ವ್ಯತ್ಯಾಸವಾಗುತ್ತಿರುತ್ತದೆ. ಗೀಗೀ ಮೇಳದವರಲ್ಲಿ ಗಂಡು ಹೆಚ್ಚೆಂದು ಹಾಡುವ ಒಂದು ಪಂಗಡ, ಹೆಣ್ಣು ಹೆಚ್ಚೆಂದು ಹಾಡುವ ಇನ್ನೊಂದು ಪಂಗಡ-ಹೀಗೆ ಎರಡು ಪ್ರಕಾರಗಳಿರುತ್ತವೆ. ಇವನ್ನು ಹರದೇಶಿ, ನಾಗೇಶಿ ಎಂದೂ ಕಲ್ಲಿ, ತುರಾ ಎಂದೂ ಹೇಳಲಾಗುವದು. ಇವರಲ್ಲಿ ಪರಸ್ಪರ ವಾದ, ವಿವಾದಗಳ ಹಾಡುಗಳು ಜರುಗುತ್ತವೆ. ಇವನ್ನು ಸವಾಲ್-ಜವಾಬ ಎಂದೂ ಹೇಳಲಾಗುವದು. ಗ್ರಾಮೀಣರು ಹಬ್ಬ ಹರಿದಿನಗಳಲ್ಲಿ, ಜಾತ್ರೆ, ಉತ್ಯವಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ಗೀಗೀ ಮೇಳಗಳಿಗೆ ಆಮಂತ್ರಣ ಕೊಟ್ಟು ಕರೆಸುವರು. ಇವರೆಲ್ಲ ಈಗ ವೃತ್ತಿಗಾಯಕರಾಗಿರುವರು. ಗೀಗೀ ಹಾಡುಗಾರರಲ್ಲಿ ಹೆಣ್ಣು ಮಕ್ಕಳ ಕಲಾ ತಂಡಗಳೂ ಇರುತ್ತವೆ. ಇವರೆಲ್ಲ ಹೆಣ್ಣು ಹೆಚ್ಚೆಂದು ಹಾಡುವ ನಾಗೇಶಿ ಅಥವಾ ತುರಾ ಕಲಾವಿದರು. ವಿಜಾಪುರ ಜಿಲ್ಲೆಯಲ್ಲಿ ಈ ಗೀಗೀ ಹಾಡಿನ ಮುಖ್ಯ ಕಲಾ ತಂಡಗಳು ಇಂತಿವೆ :

೧. ಶ್ರೀ ಶರಣಪ್ಪ ಕಲ್ಲಪ್ಪ ವಾಲಿ. (ಕವಿ ಹಾಗೂ ಪಿಟೀಲುವಾದಕ) ಮೇಳದ ಮುಖ್ಯಸ್ಥ. ಸಾಲೋಟಗಿ, ತಾ. ಇಂಡಿ. ಈ ತಂಡದಲ್ಲಿ ಶ್ರೀ ಬಸಯ್ಯ ಪರೂತಯ್ಯ ಮಠಪತಿ, ಶ್ರೀ ನಿಂಗಪ್ಪ ಖ್ಯೆರಾಟ ಹಾಗೂ ಶ್ರೀ ರೇವಣ್ಣಸಿದ್ದಪ್ಪ ಕಂಬಾರ. ಇವರ ಮೇಳ ನಾಲ್ಕು ದಶಕಗಳವರೆಗೆ ಕಲಾಸೇವೆ ಮಾಡಿದೆ. ಈಗ ಈ ನಾಲ್ವರೂ ನಿಧನರಾಗಿದ್ದಾರೆ. ಇವರೆಲ್ಲರೂ ಕರ್ನಾಟಕ ಸರಕಾರದ ಗೌರವ ಮಾಸಾಶನ ಪಡೆಯುತ್ತಿದ್ದರು.

೨. ಶ್ರೀಮತಿ ದುರಗವ್ವ ತಂದೆ ಯಮನಪ್ಪ ಮಾದರ. ಮಳಿಯೋಗಿ ಗೀಗೀ ಮೇಳ ಧನ್ಯಾಳ. ತಾ. ಜಿ. ವಿಜಾಪುರ. ಈ ತಂಡದಲ್ಲಿ ನಾಲ್ಕು ಜನ ಕಲಾವಿದರಿದ್ದಾರೆ. ಶ್ರೀಮತಿ ದುರಗವ್ವ ದಿನಾಂಕ ೧೪-೬-೨೦೦೦ ದಿಂದ ಸರಕಾರದ ಮಾಸಾಶನ ಪಡೆಯುತ್ತಿದ್ದಾರೆ.

೩. ಶ್ರೀ ಹುಸೇನಿಸಾಬ ಅನಸರಸಾಬ ವಾಲಿಕರ. ಸಾರವಾಡ. ತಾ.ಜಿ.ವಿಜಾಪುರ. ಈ ಕಲಾ ತಂಡದಲ್ಲಿ ನಾಲ್ವರು ಕಲಾವಿದರಿದ್ದಾರೆ. ಹುಸೇನಿಸಾಬನಿಗೆ ದಿನಾಂಕ ೧-೧-೧೯೮೫ ರಿಂದ ಗೌರವ ಮಾಸಾಶನ ದೊರೆಯುತ್ತಿದೆ.

೪. ಶ್ರೀಮತಿ ಹನುಮವ್ವ ಶಾಸಪ್ಪ ಹಂಗರಗಿ (ಮಾದರ). ಕಂಬಾಗಿ ತಾ. ಜಿ. ವಿಜಾಪುರ. ಸಾಕಷ್ಟು ಪ್ರಶಸ್ತಿ, ಪ್ರಮಾಣ ಪತ್ರ ಪಡೆದ ಕಲಾತಂಡವಿದು.

೫. ಶ್ರೀ ವಿಠ್ಠಲ ಭೀಮಶ್ಯಾಕಟಬರ. ಮಲಘಾಣ. ತಾ. ಸಿಂದಗಿ ಜಿ. ವಿಜಾಪುರ. ಇವರನ್ನೊಳಗೊಂಡು ನಾಲ್ಕು ಜನರಿರುವ ಕಲಾಮೇಳ. ವಿಠ್ಠಲ ಅವರಿಗೆ ದಿನಂಕ ೩-೭-೨೦೦೧ರಿಂದ ಗೌರವ ಮಾಸಾಶನ ದೊರೆಯುತ್ತಿದೆ.

೬. ಶ್ರೀ ಶಂಕರ ಮಾರುತಿ ಕಟಬರ. ಕುಮಸಗಿ. ತಾ. ಸಿಂದಗಿ. ೪ ಜನರ ಕಲಾತಂಡ. ಅನೇಕಕಡೆ ಕಾರ್ಯಕ್ರಮ ನೀಡಿದ್ದಾರೆ.

೭. ಶ್ರೀಮತಿ ಭೀಮವ್ವ ತಂದೆ ಯಮನಪ್ಪ ಮಾದರ. ಮಡ್ನಳ್ಳಿ. ತಾ. ಸಿಂದಗಿ. ಇದು ನಾಲ್ಕು ಜನರ ಕಲಾಮೇಳವಾಗಿದೆ.

೮. ಶ್ರೀ ಶಾಂತಪ್ಪ ಶಿವಯೋಗಪ್ಪ ತಳವಾರ. ಖೇಡಗಿ. ತಾ ಇಂಡಿ. ನೂರಾರು ಕಡೆಗಳಲ್ಲಿ ಕಲಾಸೇವೆ ಮಾಡಿದ್ದಾರೆ. ಇದು ನಾಲ್ಕು ಜನರ ಕಲಾಮೇಳ.

೯. ಶ್ರೀಮತಿ ರೇಣುಕಾ ತಂದಿ ಪೀರಪ್ಪ ಮಾದರ. ಗಣಿಹಾರ. ತಾ. ಸಿಂದಗಿ. ಇವರೂ ಅನೇಕಕಡೆ ಕಾರ್ಯಕ್ರಮ ನೀಡಿದ್ದಾರೆ.

ಇದಲ್ಲದೆ ಇನ್ನೂ ೨೦ ರಷ್ಟು ಗೀಗೀ ಮೇಳಗಳು ನಮ್ಮ ಜಲ್ಲೆಯಲ್ಲಿವೆ.

## ವಿವಿಧ ಹಾಡುಗಳು

ಇಂತಹ ಹಾಡುಗಳಲ್ಲಿ ಬೀಸುವ ಕುಟ್ಟುವ ಹಾಡುಗಳು, ಮದುವೆಯ ಹಾಡುಗಳು, ಹಬ್ಬಗಳ ಹಾಡುಗಳು, ಸೋಬಾನೆ ಹಾಡುಗಳು, ಜೋಗುಳ ಹಾಡುಗಳು, ಮೊದಲಾದವುಗಳೂ ಸಮಾವೇಶವಾಗುತ್ತವೆ. ಇಂಡಿ ತಾಲೂಕಿನ ಸಲೋಟಗಿಯ ಶ್ರೀಮತಿ ಗೌರಮ್ಮ ಶೆಟ್ಟೆಪ್ಪ ಚಲವಾದಿ ಎಂಬ ಕಲಾವಿದೆ. ಇಂತಹ ವೈವಿಧ್ಯಮಯ ಹಾಡುಗಳನ್ನು ಹಾಡುವದರಲ್ಲಿ ಹೆಸರಾಗಿದ್ದಳು. ಇವಳಿಗೆ ದಿನಾಂಕ ೧-೧೧-೧೯೯೮ರಂದು ರಾಜ್ಯ ಪ್ರಶಸ್ತಿ ಬಂದಿತ್ತು. ೧೯೯೯ರಲ್ಲಿ ಡಾ. ಅಂಬೇಡಕರ ಪ್ರಶಸ್ತಿ ಹಾಗೂ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಶರಣರಿಂದ 'ಜನಪದ ಶ್ರೀ' ಪ್ರಶಸ್ತಿ, ಇಲಕಲ್ಲ ಹಾಗೂ ಗದಗ ಶ್ರೀಗಳವರಿಂದ ಸನ್ಮಾನ-ಇವು ಈ ಕಲಾವಿದೆಗೆ ಸಂದ ಗೌರವಗಲಾಗಿದ್ದವು. ಈ ಕಲಾವಿದೆ, 'ಬಯಲು ವಿಶ್ವವಿದ್ಯಾಲಯದ ಬೆಡಗಿನ ಹಾಡುಗಾರ್ತಿ, ದೀಡಸಾವಿರ ಹಾಡಿನ ದೊರೆಸಾನಿ, ಜನಪದ ಯಕ್ಷಿಣಿ, ಶೋಷಿತ ವರ್ಗದ ಶಾರದೆ, ಜನಪದ ಸಿರಿ. ಮೊದಲಾದ ಗೌರವಗಳಿಗೆ ಪಾತ್ರಳಾಗಿ ದಿನಾಂಕ ೧೪-೬-೨೦೦೨ರಂದು ನಿಧನಳಾದುದು ಜನಪದ ಲೋಕಕ್ಕೆ ತುಂಬಲಾರದ ಹಾನಿ.

ಈ ಬಗೆಯ ಹಾಡುಗಳನು ಹಾಡುವ ಗರತಿಯರು ವಿಜಾಪುತ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಈಗಲೂ ಸಿಗುತ್ತಾರೆ. ಯಾಂತ್ರಿಕ ಯುಗದ ಗಂಡುಗಾಳಿಯಿಂದ ಬೀಸುವ ಕುಟ್ಟುವ ಕ್ರಿಯೆ ನಿಂತು ಈ ಹಾಡುಗಳೂ ಮರೆಯಾಗ ತೊಡಗಿದುದು ಇಂದಿನ ದುರಂತವೆಂದೇ ಹೇಳಬೇಕು.

# ೪. ಕುಣಿತ ಪ್ರಧಾನ ಕಲೆಗಳು

## ಡೊಳ್ಳಿನ ಕುಣಿತ

ಜನಪದ ಕಲೆಗಳಲ್ಲಿ 'ಗಂಡುಕಲೆ' ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮೀಸಲಾದ ಕಲೆ. ಒಳ್ಳೆಯ ಹುರಿಕಟ್ಟಾದ ಮೈಕಟ್ಟು ಮತ್ತು ಶಕ್ತಿಯುಳ್ಳ ಕಲಾವಿದರು ಮಾತ್ರ ಈ ಕಲೆಯನ್ನು ಪ್ರದರ್ಶಸಬಲ್ಲರು. ಈ ಕುಣಿತದಲ್ಲಿ ಪರಿಣತಿ ಪಡೆದವರು ಸಾಮಾನ್ಯವಾಗಿ ಕುರುಬ ಜನಾಂಗದವರು. ಡೊಳ್ಳುಕುಣಿತದಲ್ಲಿ ಅನೇಕ ಪ್ರಕಾರಗಳಿದ್ದು ಅವುಗಳಲ್ಲಿ ಪ್ರಮುಖವಾದ ಕೆಲವು

ಇಂತಿವೆ: ಕುಳಿತು ಬಾರಿಸುವದು-ಕುಕ್ಕರಗಾಲಿನಲ್ಲಿ ಕುಳಿತು ಡೊಳ್ಳು ಬಾರಿಸುತ್ತ ಕುಪ್ಪಳಿಸುವುದು, ಇದು ನಿಧಾನವಾಗಿ ನಡೆಯುತ್ತದೆ. ಲಾಗಹಾಕುವದು-ಇದನ್ನು ತಂಡದಲ್ಲಿರುವ ಕೆಲವರು ಮಾತ್ರ ಅಭ್ಯಾಸ ಮಾಡಿರುತ್ತಾರೆ. ಡೊಳ್ಳು ಬಾರಿಸುತ್ತಲೇ ಗತ್ತಿಗೆ ತಕ್ಕಂತೆ ಲಾಗ ಹಾಕುತ್ತಾರೆ, ಮತ್ತೆ ನೇರಸ್ಥಿತಿಗೆ ಬಂದು ಗತ್ತು ತಪ್ಪದಂತೆ ಡೊಳ್ಳು ಬಾರಿಸುವರು. ಹಾರಿ ಬಾರಿಸುವದು-ಡೊಳ್ಳು ಬಾರಿಸುತ್ತಲೇ ಎರಡುಮೂರು ಅಡಿ ಮೇಲೆ ನೆಗೆಯುವರು. ಮಂಡಿ ಬಡಿತ-ವೇಗದ ಬಡಿತ ನಡೆದಿರುವಾಗ ಇಬ್ಬರು ಕಲಾವಿದರು ಎಡಗಾಲು ಮಂಡಿಯನ್ನು ನೆಲಕ್ಕೆ ಒತ್ತಿ ಬಲಗಾಲನ್ನು ಊರಿಕೊಂಡು ಡೊಳ್ಳು ಬಾರಿಸುವರು. ಮರಗಾಲು ಬಡಿತ-ಸುಮಾರು ಒಂದರಿಂದ ಎರಡು ಅಡಿ ಎತ್ತರದ ಮರಗಾಲನ್ನು ಕಟ್ಟಿಕೊಂಡು ಡೊಳ್ಳು ನುಡುಸುವರು. ಗಾಡಿ ಚಕ್ರದ ಬಡಿತ-ಕಬ್ಬಿಣದ ಅಚ್ಚಿನ ಮೇಲೆ ಎತ್ತಿನ ಗಾಡಿಯ ಚಕ್ರವನ್ನಿಟ್ಟು ಅದರ ಮೇಲೆ ನಿಂತುಕೊಂಡು ತಲೆಯಮೇಲೆ ತುಂಬಿದ ಕೊಡವನ್ನಿಟ್ಟುಕೊಂಡು ಡೊಳ್ಳು ಬಾರಿಸುವರು. ಇದೊಂದು ವಿಶೇಷ ಪ್ರಕಾರದ ಕಲೆಯಾಗಿದೆ. ಇದಲ್ಲದೆ ಬಾಯಲ್ಲಿ ತುಂಬಿದ ಕೊಡ ಕಟ್ಟಿಕೊಂಡು ನೀರು ಚೆಲ್ಲದಂತೆ ಡೊಳ್ಳು ಬಾರಿಸುತ್ತ ಸುತ್ತುವರು. ಅಂಗಾತ ಮಲಗಿ ಡೊಳ್ಳು ಬಾರಿಸುತ್ತ ಹಾಗೆಯೇ ತೆವಳುತ್ತ ಸುತ್ತುವರು. ಕಲಾವಿದನ ಹಿಂದೆ ಮತ್ತು ಮುಂದೆ ಎರಡು ಡೊಳ್ಳುಗಳನ್ನು ಕಟ್ಟಿಕೊಂಡು ಆ ಡೊಳ್ಳುಗಳ ಮೇಲೆ ಚಿಕ್ಕಬಾಲಕರನ್ನು ಕೂಡಿಸಿಕೊಂಡು ಎರಡೂ ಡೊಳ್ಳುಗಳನ್ನು ಬಾರಿಸುತ್ತಾರೆ. ಡೊಳ್ಳು ಕುಣಿತದಲ್ಲಿ 'ರಾವಳ ಹಾಕುವದು' ಎಂಬ ವಿಶಿಷ್ಟ ಕಲೆಯಿದೆ. ಇದಕ್ಕೆ ಜಡೆ ಹೆಣೆಯುವದು ಎಂದೂ ಹೇಳಲಾಗುವದು.

ಡೊಳ್ಳಿನ ಕುಣಿತದಲ್ಲಿ ವಿಜಾಪುರ ಜಿಲ್ಲೆಯ ಶ್ರೀ ವಿಠ್ಠಲ ಜಟ್ಟೆಪ್ಪ ಪೂಜಾರಿ, ಕಾರಿಕೊಳ್ಳ (ಸಿದ್ದಾಪುರ. ಕೆ); ಶ್ರೀ ಕಲ್ಲಪ್ಪ ದುಂಡಪ್ಪ ಬೂದಿಹಾಳ, ಸವನಳ್ಳಿ ತಾ. ವಿಜಾಪುರ; ಶ್ರೀ ಮಲ್ಲಪ್ಪ ಜಟ್ಟೆಪ್ಪ ತಾಳೇವಾಡ, ಮನಗೂಳಿ ತಾ. ಬ. ಬಾಗೇವಾಡಿ; ಶ್ರೀ ಕರಿಯಪ್ಪ ಶಿವಪ್ಪ ತಳವಾರ, ಧನ್ಯಾಳ ತಾ. ವಿಜಾಪುರ ಮೊದಲಾದ ಪ್ರಸಿದ್ಧ ಡೊಳ್ಳಿನ ಕುಣಿತದ ತಂಡಗಳಿವೆ. ಇವಲ್ಲದೆ ಈ ಜಿಲ್ಲೆಯಲ್ಲಿ ಇನ್ನೂ ಹತ್ತೆಂಟು ಡೊಳ್ಳು ಕುಣಿತದ ತಂಡಗಳು ಇರುತ್ತವೆ.

## ಕೀಲುಕುದುರೆ ಕುಣಿತ

ವಿಜಾಪುರ ಜಿಲ್ಲೆಯಲ್ಲಿ ಕೀಲುಕುಣಿತದ ನಾಲ್ಕಾರು ಕಲಾತಂಡಗಳಿವೆ. ಕೀಲುಕುದುರೆಯನ್ನು ಬಿದಿರಿನ ಕೊಲುಗಳಿಂದ ತಯಾರಿಸುತ್ತಾರೆ. ಕುದುರೆಯ ಹೊಟ್ಟೆ, ಎದೆ ಮತ್ತು ಹಿಂಭಾಗವನ್ನು ಬಿದಿರು ಸೀಳಿ ಬಾಗಿಸಿ ರಚಿಸಿರುತ್ತಾರೆ. ಅದರ ಸುತ್ತ ಬಣ್ಣದ ವಸ್ತ್ರವನ್ನು ಹೊದಿಸಿ ಕುದುರೆಯ ಮುಖವಾಡಿ ಜೋಡಿಸಿರುವರು. ಈ ಕುಣಿತದವನು ಮರಗಾಲು ಕಟ್ಟಿಕೊಂಡು ಕುದುರೆಯ ಮೇಲೆ ಕುಳಿತಂತೆ, ನಡುವೆ ಸೇರಿ, ವಾದ್ಯದ ಗತ್ತಿಗೆ ಅನುಗುಣವಾಗಿ ಕುದುರೆಯನ್ನು ಕುಣಿಸಿದಂತೆ, ತಾನೇ ಕುಣಿಯುವನು. ಹೀಗೆ ಕುಣಿಸುವ ಕಲಾವಿದನ ವೇಷವೂ ಕಲಾತ್ಮಕವಾಗಿರುತ್ತದೆ. ಇದರ ಜೊತೆಗೆ ನವಿಲು ಕುಣಿತದ ಒಬ್ಬಬ್ಬರು ಕಲಾವಿದರೂ ಇರುವದು ವಾಡಿಕೆ. ಜೊತೆಯಲ್ಲಿ ನಾಗಸ್ವರ, ಡೋಲು, ತಮಟೆ ಇವು ಪಕ್ಕವಾದ್ಯಗಳು. ಕೆಲವೆಡೆ ಕರಡಿಮಜಲನ್ನೂ ಬಳಸುವದುಂಟು. ದೇವರ ಉತ್ಸವ, ಮದುವೆ ಸಮಾರಂಭ, ಮೆರವಣಿಗೆಗಳಲ್ಲಿ ಈ ಕಲಾವಿದರು ಭಾಗವಹಿಸಿ ಮೆರುಗು ನೀಡುತ್ತಾರೆ. ಇದು ಮನರಂಜನೆಯ ಸುಂದರ ಕಲೆಯಾಗಿದೆ. ಈ ಕಲೆಯಲ್ಲಿ ಸಾರವಾಡದ ಶ್ರೀ ಮಹಮ್ಮದ ಸಾಬ, ಅನಸರ ಸಾಬ, ಸನದಿ ತಂಡದ ಕಲಾವಿದರು ಹೆಸರುಮಾಡಿದ್ದಾರೆ.

## ಹೆಜ್ಜೆ ಮೇಳ

ಈ ಕಲೆಯು ಹಿಂದು, ಮುಸ್ಲಿಮ್ ಸಾಂಸ್ಕೃತಿಕ ಸಮನ್ವಯದ ಸಂಕೇತವಾಗಿದೆ. ಇದು ಮೊಹರಮ್ ತಿಂಗಳಿನ ಹತ್ತನೆಯ ದಿನ ಮುಸ್ಲಿಮರು ಆಚರಿಸುವ 'ಅಲಾವಿ' ಹಬ್ಬದ ಕುಣಿತವಾಗಿದೆ. ಅಂತೆಯೇ ಇದನ್ನು ಅಲಾವಿ ಕುಣಿತ ಎಂದುಕರೆಯುವರು. 'ಅಲಾವಿ' ಎಂದರೆ ಕೆಂಡದಿಂದ ಮಾಡಿದ ಕುಂಡ. ಆ ಕುಂಡದ ಸುತ್ತ ಕುಣಿಯುವದರಿಂದ ಇದಕ್ಕೆ ಅಲಾವಿ (ಅಲಾಬಿ) ಕುಣಿತವೆಂದು ಹೆಸರು ಬಂದಿದೆ. ಹಿಂದುಗಳನ್ನು ಆಕರ್ಷಿಸುವ ಸಲುವಾಗಿ ಭಾರತದ ಮುಸಲ್ಮಾನ ರಾಜರು ಈ ಕಲೆಗೆ ವಿಶಿಷ್ಟವಾದ ರೂಪವನ್ನು ಕೊಟ್ಟು ಆಚರಣೆಯಲ್ಲಿ ತಂದರೆಂದು ಹೇಳಲಾಗುವದು. ಈ ಕುಣಿತದವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಒಂದೇ ಬಗೆಯ ಬಣ್ಣದ ಪಂಚೆಯನ್ನು

ಮೊಣಕಾಲಮೇಲೆ ಬಿಗಿದುಟ್ಟು, ಶರ್ಟುಧರಿಸಿ ಸೊಂಟಕ್ಕೆ ವಸ್ತ್ರದಿಂದ ಬಿಗಿದು ಕಟ್ಟಿಕೊಂಡಿರುವರು. ತಲೆಗೆ ಬಿಗಿದ ವಸ್ತ್ರ ಕಟ್ಟಿಕೊಂಡು ಹಲಗೆ ಗತ್ತಿಗೆ ಅನುಗುಣವಾಗಿ ಕುಣಿಯುವರು. ಈ ಮೇಳದಲ್ಲಿ ೨೦ರಿಂದ ೨೫ ರಷ್ಟು ಕಲಾವಿದರಿದ್ದು ಇವರಲ್ಲಿ ಹೆಚ್ಚಾಗಿ ಹಿಂದುಗಳೇ ಇರುವರು. ಕುಣಿತದ ಕೊನೆಯಲ್ಲಿ ಯಾ ಹುಸೇನ ಧೀನ್, ಯಾ ಇಮಾಮ ಧೀನ್ ಎಂದು ಹೇಳುವದು ವಾಡಿಕೆ. ಇಲ್ಲಿಯೂ ಗೋಪು ಹೆಣೆಯುವ ಹಾಗೂ ಬಿಚ್ಚುವ ಕಲೆ ಆಕರ್ಷಕವಾಗಿರುವದು.

ವಿಜಾಪುರ ಜಿಲ್ಲೆಯಲ್ಲಿ ಶ್ರೀ ಸದಾಶಿವ ಬಸಪ್ಪ ಜಮಖಂಡಿ ಕಣಬೂರ ತಾ. ವಿಜಾಪುರ ಇವರ ಪ್ರಸಿದ್ಧ ಹೆಜ್ಜೆಮೇಳವಿದೆ. ಅಲ್ಲಲ್ಲಿ ಹಳ್ಳಿಗಳಲ್ಲಿ ಹತ್ತೆಂಟು ಹೆಜ್ಜೆಮೇಳಗಳಿರುವದನ್ನು ಕಾಣುತ್ತೇವೆ.

## ಸಂಪ್ರದಾನಿ ದಟ್ಟಿ ಕುಣಿತ

ಇದೊಂದು ನಮ್ಮ ಜಿಲ್ಲೆಯ ವಿಶಿಷ್ಟ ಕಲೆಯಾಗಿದೆ. ಈ ಕಲೆಯಲ್ಲಿ ಸುಮಾರು ೧೨ಜನ ಕಲಾವಿದರಿರುತ್ತಾರೆ. ಸಂಪ್ರದಾನಿ ವಾದನದೊಂದಿಗೆ ದಟ್ಟಿ ಕುಣಿತದ ಕಲಾವಿದರು ಕುಣಿಯುತ್ತ ಕಲಾಪ್ರದರ್ಶನ ಮಾಡುತ್ತಾರೆ. ಈ ಕಲಾವಿದರೆಲ್ಲ ಸಾಮಾನ್ಯವಾಗಿ ಯುವಕರಿರುತ್ತಾರೆ. ಶ್ರೀ ಬಸಪ್ಪ ಸಿದ್ದಪ್ಪ ಹಾವಡಿ ಬಬಲೇಶ್ವರ ತಾ. ವಿಜಾಪುರ ಹಾಗೂ ಶ್ರೀ ಹನುಮಂತಪ್ಪ ಗೋವಿಂದಪ್ಪ ಹೂಗಾರ ಹಂಡರಗಲ್ಲ ತಾ. ಮುದ್ದೇಬಿಹಾಳ-ಇವೆರಡೂ ಈ ಕಲೆಯ ಶ್ರೇಷ್ಠ ಕಲಾತಂಡಗಳು. ಶ್ರೀ ಬಸಪ್ಪ ಸಿದ್ದಪ್ಪ ಹಾವಡಿ ಇವರಿಗೆ ದಿನಾಂಕ ೩-೭-೨೦೦೧ ರಿಂದ ಕರ್ನಾಟಕ ಸರಕಾರದ ಗೌರವ ಮಾಸಾಶನ ದೊರೆಯುತ್ತಿದೆ. ಈ ಕಲಾಮೇಳವು ೨೦೦೩ ಹಾಗೂ ೨೦೦೪ ಈ ಎರಡೂ ವರ್ಷ ಮೈಸೂರು ದಸರಾ ಉತ್ಸವದಲ್ಲಿ ದಟ್ಟಿ ಕುಣಿತ ಪ್ರದರ್ಶನ ನೀಡಿ ಪ್ರಶಸ್ತಿ ಪಡೆದಿದೆ. ಹಾಗೆಯೇ ಶ್ರೀ ಹನುಮಂತಪ್ಪ ಗೋವಿಂದಪ್ಪ ಹೂಗಾರ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೨೦೦೬ ನೇ ವರ್ಷದ ಪ್ರಶಸ್ತಿ ದೊರೆತಿದೆ.

## ಬಯಲಾಟದ ಕುಣಿತ

ಬಯಾಲಾಟಗಳು ಹಳ್ಳಿಯ ಜಾತ್ರೆ, ಉತ್ಸವಗಳಲ್ಲಿ ಇಡೀರಾತ್ರಿ ನಡೆಯುತ್ತಿದ್ದವು. ಸುಂದರವಾದ ಗಂಗಾಳಮಂಟಪವನ್ನು ಸಿದ್ಧಪಡಿಸಿ ಮೂರಡಿ ಎತ್ತರದಲ್ಲಿ ಹಲಗೆಗಳ ವೇದಿಕೆಯುನ್ನು ನಿರ್ಮಿಸಿ ರಾಮಾಯಣ, ಮಹಾಭಾರತದ ಪ್ರಸಂಗಗಳನ್ನು ಆಧರಿಸಿ ಈ ಕಲೆ ಪ್ರದರ್ಶನವಾಗುತ್ತಿತ್ತು. ಈ ಕಲೆಯಲ್ಲಿ ಪಾತ್ರಗಳ ಕುಣಿತ, ಹಾಡು, ಅಭಿನಯಗಳ ಮೂಲಕ ಕಥೆಯನ್ನು ಮುಂದುವರಿಸಲಾಗುತ್ತಿತ್ತು. ಆಗ ಮೈಕುಗಳಿರಲಿಲ್ಲವಾದರೂ ಪಾತ್ರಗಳ ಹಾಡು, ಮಾತುಗಳು, ನೆರೆಯ ಊರಿನವರಿಗೂ ಕೇಳಿಸುತ್ತಿದ್ದವು. ಆ ಕಾಲದಲ್ಲಿ ವಿಜಾಪುರ ತಾಲೂಕಿನ ಕಗ್ಗೋಡದ ಶ್ರೀ ಕಲ್ಲಪ್ಪ ಗುಳೇದ ಅವರು ಅಕ್ಷಯಾಂಬರ ಬಯಲಾಟದಲ್ಲಿ ಅಭಿನಯಿಸುತ್ತಿದ್ದ ಭೀಮನಪಾತ್ರವನ್ನು ಕಂಡವರು ಇಂದಿಗೂ ಕತೆ ಮಾಡಿ ಹೇಳುತ್ತಾರೆ. ಸುಮಾರು ಐವತ್ತು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಬಯಲಾಟಗಳಾದರೆ ಸುತ್ತಲಿನ ಊರುಗಳಿಂದ ಪ್ರೇಕ್ಷಕರು ಬರುತ್ತಿದ್ದರು. ಬಯಲಾಟದಲ್ಲಿ ಪುರುಷ ಪಾತ್ರಗಳು ಹಾಗೂ ಸ್ತ್ರೀ ಪಾತ್ರಗಳು ಕುಣಿಯುವದು ಕಡ್ಡಾಯ. ಆ ಕಾಲದಲ್ಲಿ ಬಯಲಾಟಗಳಲ್ಲಿ ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಿದ್ದರು. ಈ ಆಟಗಳಲ್ಲಿ ಐರಾವಣ ಮೈರಾವಣ, ಯುದ್ಧಕಾಂಡ, ವನಕಾಂಡ, ದ್ರೌಪದೀ ವಸ್ತ್ರಾಪಹರಣ, ಭಕ್ತ ಮಾರ್ಕಂಡೇಯ, ಹೇಮರೆಡ್ಡಿ ಮಲ್ಲಮ್ಮ ಮೊದಲಾದವು ಪ್ರಸಿದ್ಧವಾಗಿದ್ದವು.

## ನಂದಿಧ್ವಜ ಕುಣಿತ

ಶೈವ ಸಂಪ್ರದಾಯದ ಕುಣಿತಗಳಲ್ಲಿ 'ನಂದೀಧ್ವಜ ಕುಣಿತ' ಒಂದು ಗಂಡುಕಲೆ. ನಮ್ಮ ಜಿಲ್ಲೆಯಲ್ಲಿ ಈ ಕಲೆ ಅನೇಕ ಕಡೆಗೆ ಜಾತ್ರೆ, ಉತ್ಸವಗಳಲ್ಲಿ ಕಾಣುತ್ತೇವೆ. ನಂದೀಧ್ವಜದ ಉಗಮದ ಪೌರಣಿಕ ಹಿನ್ನೆಲೆ ಇಂತಿದೆ: ದಕ್ಷಯಾಗವನ್ನು ಧ್ವಂಸಮಾಡಲು ಬಂದ ವೀರಭದ್ರನು ಯಾಗದ ಅಧ್ವರ್ಯುಗಳನ್ನು ಖಂಡಿಸಿ ಅವರ ರುಂಡ ಚೆಂಡಾಡಿದನು. ದಕ್ಷನ ಪರಿವಾರದವರೆಂದು ಅವರನ್ನೆಲ್ಲ ಕೊಂದ ಬಳಿಕ ಅವರು ಶಿವಭಕ್ತರೆಂದು ಗೊತ್ತಾಗುತ್ತದೆ. ಆಗ ಅವರಿಗೆ ಶ್ರೇಷ್ಠ ಸ್ಥಾನ ಕೊಡಬೇಕೆಂದು ಬಯಸಿ

ವ್ಯಾಸನ ತೋಳನ್ನು ಕೋಲನ್ನಾಗಿ ಮಾಡಿ ಅದಕ್ಕೆ ಶಿವನ ವಾಹನವಾದ ನಂದಿಯ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾನೆ. ಋಷಿಗಳ ರುಂಡಗಳನ್ನು 'ಹಂಡೆ'ಗಳಾಗಿ ಮಾಡಿ ಆ ನಂದೀಕೋಲಿಗೆ ತೊಡಿಸಿದನು. ಮಹದ್ವಾರದಲ್ಲಿದ್ದ ಸಿಂಹವನ್ನು ತಂದು ಅದರ ಚರ್ಮದಲ್ಲೇ ಧ್ವಜ ಮಾಡಿ ನಂದೀಕೋಲಿನ ತುದಿಯನ್ನು ಸಿಂಗರಿಸಿದನು, ಹೀಗೆ ಸಿದ್ಧಪಡಿಸಿದ ಧ್ವಜವನ್ನೇ ಮುಂದು ಮಾಡಿಕೊಂಡು ವಿಜಯ ಘೋಷದೊಂದಿಗೆ ಕೈಲಾಸಕ್ಕೆ ತಲುಪಿದನು. ಅಂದಿನಿಂದ ನಂದಿಧ್ವಜವು ಶಿವಭಕ್ತರ ಧರ್ಮಧ್ವಜವೂ ಅಯಿತು. ನಂದೀಧ್ವಜಕ್ಕೆ ನಂದೀಕೋಲು, ವ್ಯಾಸಗೋಲು ಎಂಬ ಹೆಸರುಗಳೂ ಇವೆ.

ನಂದೀಧ್ವಜದ ಕೋಲು ಶಾಸ್ತ್ರೀಯವಾಗಿ ೧೮ಮೊಳ ಎತ್ತರವಿರುತ್ತದೆ. ಇದು ಬಿದಿರಿನ ಬಂಬನ್ನು ತಂದು ಚೆನ್ನಾಗಿ ಅದರಲ್ಲಿ ಒಳ್ಳೆಣ್ಣಿ ತುಂಬಿ ಒಣಗಿಸುತ್ತಾರೆ. ಅದು ಡೊಂಕಾಗದಂತೆ ನೇರವಾಗಿರುವಂತೆ ಎತ್ತರದಿಂದ ತೂಗುಹಾಕಿ ಕೆಳಗೆ ಭಾರವಾದ ಕಲ್ಲುಗಳನ್ನು ಜೋಡಿಸುತ್ತಾರೆ. ಅದರ ವ್ಯಾಸ ಅಂದಾಜು ನಾಲ್ಕು ಇಂಚಿಷ್ಟು ಇರುತ್ತದೆ. ಈ ೧೮ ಮೊಳದ ಎತ್ತರದ ಕೋಲಿನ ಒಂದೊಂದು ಮೊಳವೂ ಒಂದೊಂದು ಧರ್ಮದ ಸಂಕೇತವೆಂಬ ಕಲ್ಪನೆಯಿದೆ. ಕೋಲಿನ ತುದಿಗೆ ಕಟ್ಟುವ ಕಾವಿಬಣ್ಣದ ರೇಶ್ಮೆಬಟ್ಟೆಯೇ ಪಟ ಅಥವಾ ಧ್ವಜ ಎಂದು ಹೇಳಲಾಗುವದು. ಮೇಲಿನ ತುತ್ತತುದಿಯಲ್ಲಿ ಬಿದಿರಿನ ರೇಶ್ಮೆ ದಾರದ ಅಲಂಕೃತ ಖೇಳಣಿ ಇದ್ದು ಅದರ ಸುತ್ತು ಗೊಂಡೆಗಳಿರುತ್ತವೆ. ಇದನ್ನು ಸೊಂಟದ ಪಟ್ಟಿಯ ಮೇಲೆ ಭದ್ರವಾಗಿಟ್ಟು ಕರಡಿಮಜಲಿನ ಗತ್ತಿನೊಂದಿಗೆ ಕುಣಿಯುವರು. ಎರಡು ನಂದೀಧ್ವಜಗಳಿದ್ದರೆ ಎದುರು ಬದಿರಾಗಿ ಕರಡಿ ಮಜಲಿನ ಗತ್ತಿನೊಂದಿಗೆ ಕುಣಿಯುವರು. ಇಂಡಿ ತಾಲೂಕಿನ ಸಾಲೋಟಗಿಯ ಶ್ರೀ ಶಿವಯೋಗೀಶ್ವರ ಜಾತ್ರೆಯಲ್ಲಿ ಹಗ್ಗಗಳ ಸಹಾಯವಿಲ್ಲದೆ ಎರಡು ನಂದೀಧ್ವಜಗಳೊಂದಿಗೆ ಎದುರು ಬದಿರಾಗಿ ಕುಣಿಯುವ ದೃಶ್ಯ ಅದ್ಭುತವಾದವಾಗಿದೆ. ಕೆಲವು ಜಾತ್ರೆಗಳಲ್ಲಿ ಗುಡ್ಡದ ಮೇಲೆ ಗುಡಿಗಳಿದ್ದರೆ ನಂದೀ ಧ್ವಜ ಹೊತ್ತು ಗುಡ್ಡಹತ್ತಿ ಮೇಲೆ ಹೋಗುವ ಕಾರ್ಯ ಪರಿಶ್ರಮದ್ದೆನಿಸುತ್ತದೆ. ಈ ನಂದೀಧ್ವಜಗಳಿಗೆ ಸುತ್ತುವ ರೇಶಿಮೆಯ ಆಕರ್ಷಕ ಹೊದಿಕೆ, ಭಕ್ತರಲ್ಲಿ ಭಕ್ತಿಭಾವ ಮೂಡಿಸುವಂತಿರುತ್ತದೆ.

ನಂದೀಧ್ವಜ ಕುಣಿತದಲ್ಲಿ ಶಕ್ತಿಗಿಂತ ಯುಕ್ತಿಯೇ ಮೇಲು ಎಂದೆನಿಸುತ್ತದೆ. ಇದನ್ನು ಕುಣಿಯುವಾಗ ಬಿದ್ದರೆ ಅಪಶಕುನವೆಂದು ಭಾವಿಸುವದರಿಂದ ಕುಣಿಯುವವರು ಅಧಿಕ ಎಚ್ಚರಿಕೆ ವಹಿಸುತ್ತಾರೆ.

## ಲಂಬಾಣಿ ಕುಣಿತ

ವಿಜಾಪುರ ಜಿಲ್ಲೆಯಲ್ಲಿ ಲಂಬಾಣಿ ಜನರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇವರು ರಾಜಸ್ಥಾನದ ಮೂಲದವರೆಂದು ಹೇಳಲಾಗುವದು. ಇವರ ವಸತಿ ಕೇಂದ್ರಗಳಿಗೆ 'ಲಂಬಾಣಿ ತಾಂಡೆ' ಗಳೆಂದು ಕರೆಯುವರು. ಇವರಿಗೆ ಬಂಜಾರಾ, ಲಮಾಣಿ ಮೊದಲಾದ ಹೆಸರುಗಳಿವೆ. ಇವರು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಹರಡಿಕೊಂಡಿದ್ದಾರೆ.

ಲಂಬಾಣಿಗಳು ಕಷ್ಟ ಜೀವಿಗಳು. 'ಸೇವಾಬಾಯಿ' ಇವರ ತಂಡೆಯ ರಕ್ಷಾದೇವತೆ. ಇವರು ಸ್ವಾಭಿಮಾನಿಗಳು. ಬಿಕ್ಷೆ ಬೇಡುವದು ಇವರ ಧರ್ಮಕ್ಕೆ ವಿರುದ್ಧ. ಪರಸ್ಪರದಲ್ಲಿ ವಿರಸ ತಲೆದೋರಿದಾಗ ತಾಂಡೆಯ ನಾಯಕನೇ ನ್ಯಾಯಾಧೀಶನಾಗಿ ತಂಟೆ ಬಗೆಹರಿಸುತ್ತಾನೆ. ಲಂಬಾಣಿ ಮಹಿಳೆಯರ ವೇಷಭೂಷಣಗಳು ಇತರರಿಗಿಂತ ಭಿನ್ನವಾಗಿರುತ್ತದೆ. ಕೆಳಗೆ ಕೆಂಪುಬಣ್ಣದಲಂಗ (ಪೇಟಿಯಾ), ಅದರ ಮೇಲೆ ಮತ್ತು ಅಂಚಿನಲ್ಲಿ ಸುಂದರವಾದ ಕಸೂತಿಕಲೆ, ಅಲ್ಲಲ್ಲಿ ಕಾಜಿನ ಬಿಲ್ಲೆಗಳನ್ನು ಅಳವಡಿಸಿ ಕಲಾತ್ಮಕವಾಗಿ ಹೊಲಿದಿರುತ್ತಾರೆ. ಇದರ ಮೇಲೆ ಕಾಜಿನ ಬಿಲ್ಲೆ ಕಸೂತಿಗಳಿಂದ ಹೊಲಿದ ಬೆನ್ನಲ್ಲಿ ಕಟ್ಟುವಂತೆ ಕಸಿ ಇರುವ ಕುಪ್ಪಸ (ಕಾಂಜೋಳಿ), ತಲೆಯ ಮೇಲೆ ಹೊದ್ದು ಎರಡೂ ಬದಿಗೆ ಇಳಿಬಿಟ್ಟ ರಂಗುರಂಗಿನ ಮೇಲುವಸ್ತ್ರ. ಇದಕ್ಕೆ ನಾಣ್ಯಗಳಿಂದಲೂ, ಕಾಜಿನ ಬಿಲ್ಲೆಗಳಿಂದಲೂ ಕಲಾತ್ಮಕವಾಗಿ ಸಿದ್ಧಪಡಿಸಿದ ರೀತಿ ಅನುಪಮ. ಕೈಗಳಲ್ಲಿ ಅಗಲ ಪಟ್ಟಿಯ ದಂತದ ಬಳೆಗಳು, ಕಾಲಲ್ಲಿ ಬೆಳ್ಳಿಯ ಕಾಲಂದುಗೆ, ಕೈಕಾಲುಗಳ ಬೆರಳುಗಳಿಗೆ ಬೆಳ್ಳಿಯ ನಾಣ್ಯ ಬೆಸೆದು ಮಾಡಿದ ಉಂಗುರಗಳು, ಮೂಗಿನಲ್ಲಿ ಮುತ್ತಿನ ಮೂಗುತಿ, ಎರಡೂ ಬದಿಯ ಕಿವಿಗಳ ಮುಂದೆ ಇಳಿಬಿಟ್ಟ ಕೂದಲಿಗೆ ಜೋಡಿಸಿದ ಕೆನ್ನೆಗೆಜ್ಜೆ. ಇವೆಲ್ಲ ಅವರ ಸೌಂದರ್ಯವರ್ಧಕಗಳು. ಲಂಬಾಣಿ ಮಹಿಳೆಯರು ತೋಳು, ಹಣೆ, ಕೆನ್ನೆಗಳಲ್ಲಿ ಕಲಾತ್ಮಕವಾದ ಹಚ್ಚೆ ಹಾಕಿಸಿಕೊಂಡಿರುತ್ತಾರೆ.

ಇವರ ಕುಣಿತಕ್ಕೆ ಇಷ್ಟೇ ಜನರಿರಬೇಕೆಂಬ ನಿಯಮವೇನೂ ಇಲ್ಲ. ಐದರಿಂದ ಇಪ್ಪತ್ತೈದರಷ್ಟು ಹೆಂಗಳೆಯರು ಇರುತ್ತಾರೆ. ಇವರು ವೃತ್ತಾಕಾರದಲ್ಲಿ ನಿಂತು ಕುಣಿಯತೊಡಗಿದರೆ ನೋಡುವವರ ಕಣ್ಣಿಗೆ ಹಬ್ಬ. ಈ ರೀತಿ ನೃತ್ಯ ನಡೆದಾಗ ಲಂಬಾಣಿ ಗಂಡಸರು ಒಬ್ಬರಿಬ್ಬರು ಹಲಗೆ ಬಡಿಯುತ್ತಾರೆ. ಇವರ ಕುಣಿತದಲ್ಲಿ ಕೈ, ಕಾಲು, ಮತ್ತು ಸೊಂಟಗಳಿಗೆ ಹೆಚ್ಚಿನ ವ್ಯಾಯಾಮವಾಗುತ್ತದೆ. ಇವರು ಕುಣಿಯುತ್ತ ಎಡಕ್ಕೂ ಬಲಕ್ಕೂ ಮುಖ ತಿರುಗಿಸುತ್ತ ಒಂದೊಂದೇ ಕೈಯನ್ನು ನೇರವಾಗಿ ನೆಲದವರೆಗೆ ಇಳಿಸಿ ಮತ್ತೆ ಮೇಲಕ್ಕೆ ಎತ್ತುತ್ತಾರೆ. ಈ ಚಲನೆಗೆ ತಕ್ಕಂತೆ ಸೊಂಟವೂ ಬಳುಕುತ್ತಿರುತ್ತದೆ. ಹೀಗೆ ಕುಣಿಯುತ್ತಿರುವಾಗ ಹಾಡಿನ ಹೊಳೆಯನ್ನೂ ಹರಿಸುತ್ತಾರೆ.

ಇವರ ಹಾಡುಗಳು ಲಂಬಾಣಿ ಭಾಷೆಯಲ್ಲಿರುತ್ತವೆ. ಇವರ ಸಮಾಜದೇವತೆ ಸೇವಾಬಾಯಿಯ ಪ್ರಾರ್ಥನೆಯೊಂದಿಗೆ ಈ ಹಾಡು ಆರಂಭಗೊಳ್ಳುತ್ತವೆ. ಲಂಬಾಣಿ ಕುಣಿತದವರು ಆಗಾಗ ತಮ್ಮ ತಾಂಡೆದಲ್ಲಿ ರಾತ್ರಿ ಹೊತ್ತು ಈ ಕಲೆಯನ್ನು ಪ್ರದರ್ಶಿಸುತ್ತ ಇರುವರು. ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ತಮ್ಮ ಹತ್ತಿರದ ಗ್ರಾಮಕ್ಕೆ ಬಂದು ಕಲಾಸೇವೆ ಮಾಡಿ ಆಯಾ ಊರಿನ ಗಣ್ಯ ಮಾನ್ಯರಿಂದ ಹಣದ ರೂಪದಲ್ಲಿ ಬಹುಮಾನ ಪಡೆಯುತ್ತಾರೆ. ಇವರ ಕುಣಿತದ ಸೊಬಗನ್ನು ಬೆಳದಿಂಗಳ ರಾತ್ರಿಯಲ್ಲಿ ನೋಡಬೇಕು! ಲಂಬಾಣಿ ಮಹಿಳೆಯರು ಮನ ತುಂಬಿ ಕುಣಿಯುವಾಗ ಕೇಳಿ ಬರುವ ಕಾಲಗೆಜ್ಜೆಯ ಸದ್ದು, ಕೈ ತಿರುಗಿಸುವಾಗ ಕೇಳಿ ಬರುವ ದಂತದ ಬಳೆಗಳ ಸಪ್ಪಳ, ಗುಂಪುಹಾಡಿನ ಇಂಪಾದ ದನಿ, ಬಾಗಿ ಕುಣಿಯುವಾಗ ಇಳಿಬೀಳುವ ಮುಂಗೂದಲಿನ ಕುಚ್ಚಗಳ ಸೊಗಸು, ಕೈಬೀಸಿ ಆಡುವಾಗ ಉಂಟಾಗುವ ಮೇಲು ಹೊದಿಕೆ ಹಾಗೂ ಕವಡೆ ಸರಗಳ ಚೆಲ್ಲಾಟ, ಹಾಡಿನ ಸೊಲ್ಲು ತಪ್ಪಿದಾಗ ನಾಯಕಿಯ ಮುಖದಲ್ಲಿ ಕಾಣುವ ನಸುಕೋಪ, ಸೊಲ್ಲು ಸರಿಯಾದಾಗ ಎಲ್ಲರ ಮುಖದಲ್ಲೂ ಮಿಂಚುವ ನಗೆ, ಇವನ್ನೆಲ್ಲ ಪ್ರತ್ಯಕ್ಷ ಕೇಳಿ, ಕಂಡೇ ಆನಂದಿಸಬೇಕು! ಅವರ ಉಡುಪಿನಲ್ಲಿ ಜೋಡಿಸಿದ ಕಾಜಿನ ಬಿಲ್ಲೆಗಳ ಹೊಳಪು, ಅವುಗಳಲ್ಲಿ ಕಾಣುವ ಚಂದ್ರನ ಪ್ರತಿಬಿಂಬ ಇವನ್ನು ಶಬ್ದಗಳಿಂದ ವರ್ಣಿಸಲಿಕ್ಕಾಗದು.

# ಕೋಲಾಟ

ವಿಜಾಪುರ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಪ್ರಚಲಿತವಿರುವ ಒಂದು ಪ್ರಮುಖ ಕಲೆ ಕೋಲಾಟ. ಇಲ್ಲಿ ಕೋಲುಗಳೇ ಪ್ರಧಾನವಾಗಿರುವದರಿಂದ 'ಕೋಲಾಟ' ಎಂಬ ಹೆಸರು ಬಂದಿದೆ. ಈ ಕಲೆಯಲ್ಲಿ ಗಂಡು ಮಕ್ಕಳ ಮೇಳಗಳು ಇರುವಂತೆ, ಹೆಣ್ಣುಮಕ್ಕಳ ಮೇಳಗಳನ್ನೂ ಕಾಣುತ್ತೇವೆ. ಬಹುತೇಕ ಯುವಕರು ಇಲ್ಲವೆ ಯುವತಿಯರು ಸೇರಿ ಪ್ರದರ್ಶನ ನೀಡುವ ಈ ಆಟದಲ್ಲಿ ದೇಹದ ಪ್ರತಿಯೊಂದು ಅಂಗವೂ ವ್ಯಾಯಾಮಹೊಂದುತ್ತದೆ.

ಗೋಕುಲದಲ್ಲಿ ಶ್ರೀಕೃಷ್ಣನ ಜನನವಾದಾಗ ಯಾದವರು ಕೋಲಾಟದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದ್ದು ಮತ್ತು ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲುಗಳ ಮೂಲಕ ಆಟವಾಡಿದ್ದು ಈ ಕಲೆಯ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವ, ಮದುವೆ, ಸುಗ್ಗಿ ಹೀಗೆ ಹಲವಾರು ಸಂತಸದ ಪ್ರಸಂಗಗಳಲ್ಲಿ ಮನರಂಜನೆಯಾಗಿ ಈ ಕಲೆಯನ್ನು ಪ್ರದರ್ಶಿಸಲಾಗುವದು. ಕೋಲಾಟ ಕಲಾವಿದರಿಗೆ ಸುಮಾರು ಒಂದು ಅಡಿ ಉದ್ದದ ಎರಡೆರಡು ಕೋಲುಗಳು ಬೇಕಾಗುತ್ತವೆ. ಕೆಲವಡೆ ಈ ಕೋಲುಗಳಿಗೆ ಕಿರುಗೆಜ್ಜೆ ಅಳವಡಿಸಲಾಗಿರುವದು. ಆಕರ್ಷಣೆಗಾಗಿ ಈ ಕೋಲುಗಳಿಗೆ ಬಣ್ಣ ಹಚ್ಚುತ್ತಾರೆ.

ಸಾಮಾನ್ಯವಾಗಿ ಕೋಲಾಟ ಕಲಾವಿದರ ವೇಷವೆಂದರೆ ಮೊಳಕಾಲಿನ ಮೇಲೆ ಬಿಗಿಯಾಗಿ ಕಟ್ಟಿದ ದೋತರ ಇಲ್ಲವೆ ಪಂಚೆ, ಒಳಂಗಿ, ಸೊಂಟಕ್ಕೆ ಕಟ್ಟಿದ ವಸ್ತ್ರ, ತಲೆಗೂ ಬಿಗಿಯಾಗಿ ಕಟ್ಟಿದ ವಸ್ತ್ರ ಇದಿಷ್ಟು. ಸ್ತ್ರೀಯರಾದರೆ ಮೊಳಕಾಲಿನ ಮೇಲೆ ಬಿಗಿಯಾಗಿ ಉಟ್ಟ ಸೀರೆ, ಆ ಸೀರೆಯ ಸೆರಗನ್ನು ಸೊಂಟಕ್ಕೆ ಸುತ್ತಿರುತ್ತಾರೆ. ಎಲ್ಲ ಕಲಾವಿದರೂ ಕಾಲಿಗೆ ಗೆಜ್ಜೆಸರ ಕಟ್ಟಿಕೊಳ್ಳುವರು. ಕೋಲಾಟಕ್ಕೆ ಬೇಕಾಗುವ ಕೋಲು ಸಿದ್ಧಪಡಿಸುವ ವಿಧಾನದಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಕೋಲಾಟ ಕಲೆ ಶ್ರಮದಿಂದ ಕೂಡಿದುದು. ಕೋಲಾಟದಲ್ಲಿ ಕ್ರಮಬದ್ಧವಾದ ಕೋಲುಗಳ ತಾಕಲಾಟ, ಗೆಜ್ಜೆಕಟ್ಟಿದ ಕಾಲುಗಳ ಮೂಲಕ ತಾಳ, ಹಾಗೂ ಹಿನ್ನೆಲೆಯ ಹಾಡು. ಇವು ಮೂರು ಮೇಳವಿಸಬೇಕು. ಅಂದರೇನೇ ಈ ಕಲೆ ಜನಮೆಚ್ಚಿಗೆ ಪಡೆಯುವದು

ಸಾಧ್ಯ. ಇವುಗಳಲ್ಲಿ ಹಾಡಿಗೇ ಪ್ರಮುಖ ಸ್ಥಾನ. ಹಾಡಿನ ರಾಗ, ತಾಳಗಳಿಗೆ ಅನುಗುಣವಾಗಿ ಕೋಲು ಕಾಲುಗಳ ಲಯಬದ್ಧ ಬದಲಾವಣೆಯಾಗುತ್ತಿರುವದು. ಹಿಮ್ಮೇಳವಾಗಿ ಹಾಡುವ ಈ ಹಾಡುಗಳಲ್ಲಿ ನಮ್ಮ ಪುರಾಣ, ಮಹಾಕಾವ್ಯಗಳ ವಸ್ತುವನ್ನೊಳಗೊಂಡು ಇಂದಿನ ಪ್ರಚಲಿತ ಪ್ರೇಮ, ಹಾಸ್ಯ, ಕರುಣೆ ಮೊದಲಾದ ಹಾಡುಗಳನ್ನೂ ಹಾಡಲಾಗುವದು. ಈ ಕಲೆ ಸಾಮಾನ್ಯವಾಗಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಈ ಕಲೆಯಲ್ಲಿ ೧೯, ೨೦, ೨೪ ಹೀಗೆ ಕಲಾವಿದರಿರುತ್ತಾರೆ. ಆರಂಭದಲ್ಲಿ ಗಣಪತಿಸ್ತುತಿ ಮಾಡಿ, ಇಷ್ಟದೇವರ ಪ್ರಾರ್ಥನೆ ಮಾಡಿ, ಒಂದು ದೀರ್ಘ ಕವನದ ಮೂಲಕ ಕಲೆ ಮುಂದುವರಿಯುತ್ತದೆ. ನಡುನಡುವೆ ಥೈಯ್ಯ ಎಂದು ಹೇಳಿ ಕಲಾವಿದರಿಗೆ ಒಬ್ಬಿಬ್ಬರು ಹುರುಪುಗೊಳಿಸುತ್ತಾರೆ. ಕೋಲಾಟದಲ್ಲಿ ಬರುವ ಕೆಲವು ಪ್ರಕಾರಗಳು ಇಂತಿವೆ:

ಚಿತ್ತಾರದ ಕೋಲು: ಪ್ರತಿಯೊಬ್ಬರೂ ಒಬ್ಬರ ಕೋಲಿಗೆ ಇನ್ನೊಬ್ಬರು ಕೋಲು ಬಡಿಯುತ್ತ ಸುತ್ತುವದು.

ಮೂರಾಳು ಸುತ್ತಾಡುವ ಕೋಲು: ಒಬ್ಬನಿಗೆ ಮತ್ತೊಬ್ಬ ಸುತ್ತಾಡಿಕೊಂಡು ಕೋಲು ಬಡಿಯುತ್ತ ವೃತ್ತದ ಒಳಹೊಕ್ಕು ಹೊರಬರುವದು.

ಜಡೆಕೋಲು: ಇದರಲ್ಲಿ ೧೯ರವರೆಗೂ ಕಲಾವಿದರಿಂದ ಗೋಪು ಹೆಣೆಯುತ್ತ ಹಾಗೂ ಬಿಚ್ಚುತ್ತ ಕೋಲಾಟ ಆಡುವರು.

ಹೀಗೆ ಈ ಕಲೆಯಲ್ಲಿ ಹತ್ತಾರು ಪ್ರಕಾರಗಳಿವೆ. ಈ ಕಲೆಯು ಹೆಚ್ಚಾಗಿ ಮಹಾನವಮಿ ಹಾಗೂ ದೀಪಾವಳಿ ಹಬ್ಬಗಳ ಕಾಲಕ್ಕೆ ಕಂಡುಬರುವದು. ಇತ್ತೀಚೆಗೆ ಈ ಕಲೆಯು ಅವಸಾನದ ಅಂಚಿನಲ್ಲಿರುವದನ್ನು ನಮ್ಮ ಜಿಲ್ಲೆಯಲ್ಲಿ ಕಾಣುತ್ತೇವೆ.

## ಸಮ್ಮಿಶ್ರ ಕಲೆಗಳು

**ಶ್ರೀಕೃಷ್ಣ ಪಾರಿಜಾತ:** ಉತ್ತರ ಕರ್ನಾಟಕದ ಜನಪ್ರಿಯ ಬಯಲಾಟವಾದ ಇದು ತನ್ನದೇ ಆದ ಒಂದು ವಿಶಿಷ್ಟ ರಂಗ ಸಂಪ್ರದಾಯವನ್ನು ಹೊಂದಿದೆ. ಇದರ ರಂಗಪ್ರಯೋಗ, ಸಂಗೀತ ಶೈಲಿ, ಸಂಭಾಷಣಾ ವಿಧಾನಗಳಲ್ಲಿ ಇತರ ಯಾವದೇ ಬಯಲಾಟದೊಂದಿಗೆ ಹೋಲಿಕೆ ಇಲ್ಲದೇ ಇರುವರಿಂದ ಈ

ಪಾರಿಜಾತ ಕಲೆಯು ಪ್ರತ್ಯೇಕವೆಂದೇ ಹೇಳಬೇಕಾಗುತ್ತದೆ. ಕೆಲವು ಸಣ್ಣಾಟ (ದಪ್ಪಿನಾಟ) ಗಳಲ್ಲಿ ಬರುವ ಪೂರ್ವರಂಗದ ಗೊಲ್ಲತಿ ಭಾಗವು ಪಾರಿಜಾತದಲ್ಲಿಯೂ ಬರುವ ಒಂದೇ ಕಾರಣದಿಂದ 'ಪಾರಿಜಾತವು ಸಣ್ಣಾಟಗಳ ರಾಜ' ಎಂದು ಹೇಳವದು ಉಚಿತವಲ್ಲ. ಮುಖ್ಯವಾಗಿ ಪಾರಿಜಾತದ ಸಂಗೀತ ಶೈಲಿಗೂ ಉಳಿದ ಸಣ್ಣಾಟ ಮತ್ತು ದೊಡ್ಡಾಟಗಳಲ್ಲಿ ಹಾಡುಗಳನ್ನು ಮುಮ್ಮೇಳದ ಸೂತ್ರ ಧಾರನು ಹಾಡುತ್ತಿದ್ದರೆ, ಪಾರಿಜಾತದಲ್ಲಿ ಆಯಾ ಪಾತ್ರಗಳಿಗೆ ಸಂಬಂಧಿಸಿದ ಹಾಡುಗಳನ್ನು ಆಯಾ ಪಾತ್ರಗಳೇ ಹಾಡುವದನ್ನು ಕಾಣುತ್ತೇವೆ. ಈ ದೃಷ್ಟಿಯಿಂದ ಈ ಕಲೆಯನ್ನು ಪ್ರತ್ಯೇಕವಾಗಿಯೇ ಪರಿಗಣಿಸುವದು ಸೂಕ್ತವೆನಿಸುತ್ತದೆ. ಈ ಕಲೆಯಲ್ಲಿ ವಾದ್ಯ, ಗೀತ, ಸಂಭಾಷಣೆ, ಅಭಿನಯ ಎಲ್ಲವೂ ಮೇಳೈಸಿರುವದರಿಂದ ಇದನ್ನು ಸಮ್ಮಿಶ್ರಕಲೆ ಎಂದು ವರ್ಗೀಕರಿಸಲಾಗಿದೆ. ಇದು ರಾಯಚೂರು, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ವಿಶೇಷ ಖ್ಯಾತಿಯನ್ನು ಪಡೆದಿದ್ದರೂ ವಿಜಾಪುರ ಜಿಲ್ಲೆಯಲ್ಲಿಯೂ ಈ ಕಲೆ ವಿಶಿಷ್ಟ ಸ್ಥಾನ ಪಡೆದಿದೆ.

ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನು ಯಕ್ಷಗಾನ ರೂಪದಲ್ಲಿ ಪಾರಿಜಾತ ಹಾಡಗಬ್ಬವನ್ನು ರಚಿಸಿ ತನ್ನ ಮಗನನ್ನು ಕೂಡಿಕೊಂಡು ಪ್ರಯೋಗವಾಡಿ ಜನಪ್ರಿಯುಗೊಳಿಸಿದನು. ಈ ಕಥೆ ಒಬ್ಬನಿಂದ ರಚಿತವಾದುದಲ್ಲ. ಅಪರಾಳ ತಮ್ಮಣ್ಣನು ಈ ಕಥೆಯ ಪೂರ್ವಾರ್ಧ ಮಾತ್ರ ರಚನೆ ಮಾಡಿದ್ದು ಇದರ ಉತ್ತರಾರ್ಧವನ್ನು ಶಿರಗುಪ್ಪಿ ಸದಾಶಿವಯ್ಯನು ಮುಕ್ತಾಯ ಮಾಡಿದವನೆಂದು ತಿಳಿದುಬಂದಿದೆ. ಪಾರಿಜಾತದ ಈ ಕೃತಿ ನಕಲು ಮಾಡಿದ ಕಾಲ ೧೮೦೭ ಎಂದು ಹೇಳಲಾಗುವದು. ಈ ಹಾಡುಗಬ್ಬದ ರೂಪದಲ್ಲಿದ್ದ ಕಥೆಯನ್ನು ರಂಗಭೂಮಿಗೆ ಅಳವಡಿಸಿದ ಕೀರ್ತಿ ಕುಲಗೋಡ ತಮ್ಮಣ್ಣನಿಗೆ ಸಲ್ಲುತ್ತದೆ. ಇವನು ಗೋಕಾಕ ತಾಲೂಕಿನ ಕುಲಗೋಡದ ಕಲಾವಿದ. ಮರಾಠಿ ರಂಗಭೂಮಿಯ ಪ್ರಭಾವಕ್ಕೊಳಗಾದ ಕುಲಗೋಡ ತಮ್ಮಣ್ಣನು ಅಲ್ಲಿಯ 'ಗೌಳಣ' ವನ್ನು ತನ್ನ ಪ್ರಯೋಗದ ಪೂರ್ವರಂಗದಲ್ಲಿ ಸೇರಿಸಿಕೊಂಡನು. ಅಲ್ಲದೆ ಮುಖ್ಯಕಥಾನಕವನ್ನು ತನಗೆ ಸರಿಕಾಣುವಂತೆ ಮಾರ್ಪಾಡು ಮಾಡಿಕೊಂಡನು. ಇವನು ಈ ಕಲೆಯನ್ನು ೧೮೭೦

ಸುಮಾರಿನಲ್ಲಿ ರಂಗಭೂಮಿಗೆ ತಂದುದಾಗಿ ತಿಳಿದಿದೆ.

ಶ್ರೀಕೃಷ್ಣ ಭಕ್ತಿಯೇ ಈ ಕಲೆಯ ರಚನೆಗೆ ಕಾರಣ. ಈ ಪಾರಿಜಾತ ಬಯಲಾಟವನ್ನು ಜನಪ್ರಿಯಗೊಳಿಸಲು ಕುಲಗೋಡ ತಮ್ಮಣ್ಣಷ್ಟೇ ಕಾರಣಳಾದ ಇನ್ನೊಬ್ಬ ಕಲಾವಿದೆ ಕೌಜಲಗಿ ನಿಂಗಮ್ಮ. ಇವಳು ಕುಲಗೋಡ ತಮ್ಮಣ್ಣನ ಪಾರಿಜಾತ ಕಂಪನಿಯನ್ನು ಸೇರಿ ತನ್ನ ಜೀವಿತದ ಪೂರ್ಣ ಅವಧಿಯನ್ನು ಪಾರಿಜಾತಕ್ಕಾಗಿಯೇ ಮುಡುಪಿಟ್ಟಳು. ಕೌಜಲಗಿ ನಿಂಗಮ್ಮ ಸ್ವತಃ ಶ್ರೇಷ್ಠ ಕಲಾವಿದೆಯಾಗಿದ್ದಳಲ್ಲದೆ ಬಡಕುಂದ್ರಿ ಬಸಪ್ಪ, ಹುಕ್ಕೇರಿ ಸಿದ್ಧರಾಮಪ್ಪ, ನಣದಿ ಗೊಂದಲಿಗ, ಬರಗಿ ರಾಚಯ್ಯ, ನಾವಲಗಟ್ಟಿ ಸಾಂವಕ್ಕ, ಮಹಾಲಿಂಗಪುರ ರಾಜಾಸಾಹೇಬ ಮೊದಲಾದವರನ್ನು ತನ್ನ ಗರಡಿಯಲ್ಲಿ ಪಳಗಿಸಿ ಬೆಳಕಿಗೆ ತಂದಳು. ಅಂದಿನ ಪಾರಿಜಾತ ಆಟಕ್ಕೂ ಇಂದು ಪ್ರಯೋಗಿಸುತ್ತಿರುವ ಆಟಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಇಂದು ಪ್ರಯೋಗಗೊಳ್ಳುತ್ತಿರುವ ಪಾರಿಜಾತ ಕಲೆಯು ಸಮಷ್ಟಿ ಸೃಷ್ಟಿಯೆಂಬುದನ್ನು ಒಪ್ಪಿಕೊಳ್ಳಬೇಕು.

ಜಾನಪದದಲ್ಲಿ ಅತ್ಯಂತ ಜನಪ್ರಿಯವಾಗಿರುವ ಬಯಲಾಟವೆಂದರೆ ಪಾರಿಜಾತವೇ. ಇದನ್ನು ನಮ್ಮ ಹಳ್ಳಿಗರು ಎಷ್ಟು ಸಲ ನೋಡಿದರೂ ಅವರಿಗೆ ತೃಪ್ತಿ ಇಲ್ಲ. ವೃತ್ತಿ ಮೇಳಗಳು, ಹವ್ಯಾಸಿ ತಂಡಗಳು ಪಾರಿಜಾತ ಕಲೆಯನ್ನು ಜೀವಂತವಾಗಿ ಹಿಡಿದಿಟ್ಟಿವೆ. ವಿಜಾಪುರ ಜಿಲ್ಲೆಯಲ್ಲಿ 'ಶ್ರೀಕೃಷ್ಣ ಪಾರಿಜಾತ' ದ ಏಳೆಂಟು ಕಲಾ ತಂಡಗಳಿವೆ. ಅವುಗಳ ವಿವರ ಇಂತಿದೆ:

೧) ಶ್ರೀ ಶಿವನಗೌಡ ಮಲ್ಲಪ್ಪ ಕೋಟಿ - ಶ್ರೀ ಕೃಷ್ಣ ಪಾರಿಜಾತ ಸಂಘ. ಸಾರವಾಡ. ತಾ.ಜಿ. ವಿಜಾಪುರ.

ಇವರು ಈ ಕಲೆಯ ಸುಮಾರು ಮೂರು ಸಾವಿರದಷ್ಟು ಪ್ರಯೋಗಗಳನ್ನು ಪ್ರದರ್ಶಿಸಿದ್ದಾರೆ.

ಶಿವನಗೌಡರು ಈ ಆಟದಲ್ಲಿ ಶ್ರೀ ಕೃಷ್ಣನ ಪಾತ್ರವಹಿಸುತ್ತಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ದೆಹಲಿ ಕನ್ನಡ ಸಂಘದ ಪ್ರಶಸ್ತಿಗಳನ್ನೊಳಗೊಂಡು ಅನೇಕ ಪ್ರಶಸ್ತಿಗಳು ಸಂದಿವೆ.

೨) ಶ್ರೀ ವಿಠೋಬಾ ಕಲ್ಲಪ್ಪ ಮರಡಿ. ಸಾಲೋಟಗಿ. ತಾ. ಇಂಡಿ. ಈ

ಪಾರಿಜಾತ ಕಲಾತಂಡವು ಕಾರಣಾಂತರಗಳಿಂದ ಈಗ ನಿಂತುಹೋಗಿದೆ. ಈ ಕಲಾವಿದರು ಕರ್ನಾಟಕ ಸರಕಾರದ ಆದೇಶದನ್ವಯ ಕರ್ನಾಟಕ ರಾಜ್ಯೋತ್ಸವದಂದು ಹೊಸದೆಹಲಿಯಲ್ಲಿ ತಮ್ಮ ಆಟದ ಕಲೆಯನ್ನು ಪ್ರಯೋಗಿಸಿ ಪ್ರಶಸ್ತಿ ಪಡೆದಿದ್ದರು. ಈ ಕಲಾ ತಂಡದ ಶ್ರೀ ವಿಠೋಬಾ. ಕ. ಮರಡಿ ಮತ್ತು ಶ್ರೀ ಶಿವಯೋಗಿ ಭೀವರಾಯ ದೊಡ್ಡಿ ಇವರೀರ್ವರು ಕರ್ನಾಟಕ ಸರಕಾರದ ಕಲಾವಿದರ ಗೌರವ ಮಾಸಾಶನ ಪಡೆಯುತ್ತಿದ್ದಾರೆ.

೩) ಶ್ರೀ ಸಂಗಪ್ಪ ಈರಪ್ಪ ಮಾದನ ಶೆಟ್ಟಿ. ಶ್ರೀ ಬಸವೇಶ್ವರ ಬಯಲಾಟ ಸಂಘ. ಬಸವನ ಬಾಗೇವಾಡಿ. ಜಿ. ವಿಜಾಪುರ. ಈ ಸಂಘದ ಶ್ರೀಕೃಷ್ಣ ಪಾತ್ರಧಾರಿ ಶ್ರೀ ಸಂಗಪ್ಪ ಈ ಮಾದನ ಶೆಟ್ಟಿ ಮತ್ತು ಸತ್ಯಭಾಮಾ ಪಾತ್ರದ ಶ್ರೀಮತಿ ಮಾತಂಗೆವ್ವ ಇವರಿಬ್ಬರೂ ರಾಜ್ಯಸರಕಾರದ ಮಾಸಾಶನ ಪಡೆಯುತ್ತಿದ್ದಾರೆ. ಶ್ರೀಮತಿ ಮಾತಂಗೆವ್ವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದವರಾಗಿದ್ದಾರೆ.

೪) ಶ್ರೀ ಈಶ್ವರಯ್ಯ ಸಂಗಯ್ಯ ಪೂಜಾರಿ. ಸಾರವಾಡ ತಾ. ಜ.ವಿಜಾಪುರ. ಈ ಸಂಘದ ಮುಖ್ಯಸ್ಥ ಶ್ರೀ ಈಶ್ವರಯ್ಯ (ಭಾಗವತ) ಮತ್ತು ಸತ್ಯಭಾಮಾ ಪಾತ್ರದ ಶ್ರೀ ಮಲ್ಲಪ್ಪ ಸಿದ್ದಪ್ಪ ಯರನಾಳ ಹಾಗೂ ಶ್ರೀ ಶಿವಾಜಿ ನಾತೋಬಾ ನಿಕ್ಕಂ (ತಬಲಾವಾದಕ, ಕುರುಡ)-ಈ ಮೂವರೂ ಗೌರವ ಮಾಸಾಶನ ಪಡೆಯುತ್ತಿದ್ದಾರೆ. ಇವರ ತಂಡಕ್ಕೆ ಅನೇಕ ಪ್ರಶಸ್ತಿಗಳು ಬಂದಿವೆ.

೫) ಶ್ರೀ ಗುರುಪಾದಯ್ಯ ಮಲ್ಲಯ್ಯ ಧಾರವಾಡಮಠ, ಕಾಖಂಡಕಿ ತಾ. ಜಿ. ವಿಜಾಪುರ. ಇವರಿಗೆ ಸರಕಾರದ ಗೌರವ ಮಾಸಾಶನ ಬರುತ್ತಲಿದೆ. ಅನೇಕ ಪ್ರಶಸ್ತಿ ಪಡೆದ ಕಲಾಸಂಘವಿದು.

೬) ಶ್ರೀ ಹಾಜಿಸಾಹೇಬ ಅಮೀನ ಸಾಹೇಬ ನದಾಫ. ಶ್ರೀಕೃಷ್ಣ ಪಾರಿಜಾತ ಸಂಘ ದಾಸ್ಯಾಳ ತಾ. ಜಿ. ವಿಜಾಪುರ ಇವರಿಗೆ ೧೯೮೮ರಿಂದ ಸರಕಾರದ ಗೌರವ ಮಾಸಾಶನ ದೊರೆಯುತ್ತಿದೆ. ಅನೇಕ ಪ್ರಶಸ್ತಿಗಳನ್ನು ಪಡೆದ ಸಂಘವಿದು.

೭) ಶ್ರೀಮತಿ ಮಾತಂಗೆವ್ವ ತಂದಿ ಯಮನಪ್ಪ ಮಾದರ ಶ್ರೀ ಬಸವೇಶ್ವರ ಬಯಲಾಟ ಸಂಘ. ಬಸವನ ಬಾಗೇವಾಡಿ.

ಇವಲ್ಲದೆ ನಮ್ಮ ಜಿಲ್ಲೆಯಲ್ಲಿ ಇನ್ನೂ ಏಳೆಂಟು ಹವ್ಯಾಸಿ ಕಲಾ ಸಂಘಗಳಿರುವದನ್ನು ಕಾಣುತ್ತೇವೆ.

## ತೊಗಲು ಗೊಂಬೆಯಾಟ

ಗೊಂಬೆಯಾಟದ ಪ್ರಕಾರಗಳಲ್ಲಿ ತೊಗಲುಗೊಂಬೆಯಾಟಕ್ಕೆ ವಿಶಿಷ್ಟ ಸ್ಥಾನವಿದೆ. ಈ ಆಟದ ಕಲಾವಿದರಿಗೆ ಕಟಬರು, ಕಳ್ಳೇಕ್ಯಾತರು ಎಂಬ ಹೆಸರಿದೆ. ಈ ಜನಾಂಗವು ಮೂಲತಃ ರತ್ನಗಿರಿ ಜಿಲ್ಲೆಗೆ ಸೇರಿದವರೆಂದು ಹೇಳಲಾಗುವದು. ಇವರು ತಮ್ಮದು ಕ್ಷತ್ರಿಯಕುಲವೆಂದು ಹೇಳುತ್ತಾರೆ. ತೊಗಲು ಗೊಂಬೆಯಾಟದಲ್ಲಿ ವಾದ್ಯ, ಗೀತ, ಸಂಭಾಷಣೆ, ಅಭಿನಯ ಎಲ್ಲವೂ ಇರುವುದರಿಂದ ಇದನ್ನೂ ಸಮ್ಮಿಶ್ರ ಕಲೆಯೆಂದೇ ಹೇಳಬೇಕಾಗುತ್ತದೆ.

ಇವರು ಎಲ್ಲಾ ಸಂದರ್ಭಗಳಲ್ಲಿ ಒಂದೇ ರೀತಿಯ ಆಟ ಪ್ರದರ್ಶಿಸುವದಿಲ್ಲ. ಉದಾಹರಣೆಗಾಗಿ ಹೇಳುವದಾದರೆ ತಿಥಿ ಸಂದರ್ಭದಲ್ಲಿ ಸ್ವರ್ಗಾರೋಹಣ ಪ್ರಸಂಗ ಆಡಿದರೆ, ಮದುವೆ ಸಂದರ್ಭದಲ್ಲಿ ಗಿರಿಜಾಕಲ್ಯಾಣ ಪ್ರಸಂಗ ಆರಿಸಿಕೊಳ್ಳುತ್ತಾರೆ. ಮಳೆಯಾಗದೆ ಕ್ಷಾಮ ತಲೆದೋರಿದಾಗ ತೊಗಲುಗೊಂಬೆ ಆಟ ಆಡಿಸಿದರೆ ಮಳೆಬರುವದೆಂಬ ನಂಬಿಕೆ ನಮ್ಮ ಜನಪದರಲ್ಲಿದೆ. ತೊಗಲು ಗೊಂಬೆಯಾಟದ ಸಂಭಾಷಣೆ ಮತ್ತು ಹಾಡುಗಳು ರಂಜನೀಯವಾಗಿರುತ್ತವೆ. ಈ ಆಟದ ಆರಂಭದಲ್ಲಿ ಗಣೇಶನ ಪೂಜಾ ಸನ್ನಿವೇಶ ಇರುವದು. ಮುಕ್ತಾಯದಲ್ಲಿ ಮಂಗಲ ಗೀತೆ ಇರುವದು ವಾಡಿಕೆ. ತೊಗಲುಗೊಂಬೆಯಾಟದಲ್ಲಿ ಡೋಲಕ ಗೆಜ್ಜೆ, ತಾಳ, ಹಾರ್ಮೋನಿಯಂ ಇವು ಬಳಸುವ ವಾದ್ಯಗಳಿರುವವು. ಈ ಕಲೆಯಲ್ಲಿ ಹೆಣ್ಣುಮಕ್ಕಳೂ ಇರುವರು. ಇವರು ದನಿಗೂಡಿಸಿ ಹಾಡುಹೇಳುತ್ತ ವಾದ್ಯ ನುಡಿಸುವರು. ಮುಖ್ಯ ಕಲಾವಿದರು ತೊಗಲು ಗೊಂಬೆಗಳನ್ನು ಕಥಾನಕಕ್ಕೆ ಅನುಗುಣವಾಗಿ ಕುಣಿಸುತ್ತ ಹಾಡು ಹೇಳುವಾಗ ಉಳಿದ ಸ್ತ್ರೀಯರು ದನಿಗೂಡಿಸುವರು. ಮಧ್ಯೆ ಮಧ್ಯೆ ಪ್ರೇಕ್ಷಕರು ಬೇಸರಗೊಳ್ಳದಂತೆ. ಹಾಸ್ಯ ಪ್ರಸಂಗಗಳನ್ನು ತಂದು ಕಥೆಯನ್ನು ಮುಂದುವರಿಸುವ ಕಲೆ ಮುಖ್ಯಕಲಾವಿದನಿಗಿರುವದು.

ಈ ಆಟದ ಕಲಾವಿದರ ವೇಷಭೂಷಣಗಳಲ್ಲಿ ವಿಶೇಷವೇನೂ

ಇರುವದಿಲ್ಲ. ಸಮಾನ್ಯವಾಗಿ ಕಚ್ಚೆಪಂಚೆ, ತಲೆಗೆ ಪೇಟ ಇಲ್ಲವೆ ಟೊಪ್ಪಿಗೆ, ಕಪ್ಪಿನ ಶರ್ಟು. ಇವು ಗಂಡಸರ ವೇಷಗಳಾದರೆ ಸ್ತ್ರೀಯರು ಸೀರೆ, ಕುಪ್ಪಸ ತೊಡುವರು. ಇತ್ತೀಚೆಗೆ ಕೆಲವರು ಚೂಡಿದಾರ ವೇಷದಲ್ಲಿರುವರು.

ತೊಗಲು ಗೊಂಬೆಯಾಡಿಸುವದು ಒಂದು ಅಪರೂಪದ ಕಲೆಯಾಗಿರುವಂತೆ, ತೊಗಲು ಗೊಂಬೆಗಳನ್ನು ತಯಾರಿಸುವದೂ ಒಂದು ಕುಶಲಕಲೆಯಾಗಿದೆ. ಈ ಗೊಂಬೆಗಳನ್ನು ಹುಲ್ಲೆಯ, ಇಲ್ಲವೆ ಆಡಿನ ಚರ್ಮದಿಂದ ತಯಾರಿಸುವರು. ಈ ಕಲೆಯಲ್ಲಿ ಪಳಗಿದ ಕೆಲವು ವೃತ್ತಿ ಕಲಾವಿದರಿದ್ದಾರೆ. ತಮ್ಮ ಊರಿಗೆ ಕ್ಷೇಮವಾದಾಗ ಕೆಲವರು ತಮ್ಮ ಹೆಸರು ಹಾಕಿಸಿ ಗೊಂಬೆಗಳನ್ನು ಮಾಡಿಸಿ ಆಟದವರಿಗೆ ಉಚಿತವಾಗಿ ಕೊಡುವದುಂಟು. ಈ ಆಟ ನಡೆದಾಗ ಕಲಾವಿದರು ಅಂಥವರ ಹೆಸರನ್ನು ಹೇಳಿ ಕೃತಜ್ಞತೆ ಸಲ್ಲಿಸುವರು. ತೊಗಲುಗೊಂಬೆಯ ಆಟಕ್ಕೆ ೫ ಅಡಿ ಚೌರಸಾಕಾರದ ಮಂಟಪವನ್ನು ಬಿದಿರು ಗಳದಿಂದ ಕಟ್ಟಿ ಸುತ್ತಲೂ ಬಣ್ಣದ ಅರಿವೆಯಿಂದ ಮುಚ್ಚಿ, ಮುಂದುಗಡೆ ಶುಭ್ರವಾದ ಬಿಳಿಯಬಟ್ಟೆಯ ಪರದೆ ಕಟ್ಟುವರು. ಒಳಗಡೆ ಆಟ ಆಡಿಸುವ ಕಲಾವಿದನು ಕಾಣದಂತೆ ಮುಂದಿನ ಪರದೆಯ ಕೆಳಗೆ ಕರಿಯ ಬಟ್ಟೆ ಕಟ್ಟಲಾಗುವದು. ವಾದ್ಯ ಮೇಳದವರು ಹೊರಗೆ ಬದಿಯಲ್ಲಿದ್ದರೂ ನಡೆಯುವದು. ರಂಗಸಜ್ಜಿಕೆ ತಯಾರಿಸುವಾಗ ಮೂಹೂರ್ತಕ್ಕನುಗುಣವಾಗಿ ರವಿವಾರ, ಸೋಮವಾರಗಳಲ್ಲಿ ಉತ್ತರ ದಿಕ್ಕಿಗೂ, ಮಂಗಳವಾರ, ಬುಧವಾರಗಳಲ್ಲಿ ಪೂರ್ವದಿಕ್ಕಿಗೂ, ಗುರುವಾರ, ಶುಕ್ರವಾರ ಹಾಗೂ ಶನಿವಾರಗಳಲ್ಲಿ ಪಶ್ಚಿಮ ದಿಕ್ಕಿಗೂ ಮಂಟಪದ ಮುಖವಿರುವಂತೆ ನೋಡಿಕೊಳ್ಳುತ್ತಾರೆ. ಆಟನಡೆದಾಗ ರಂಗಸಜ್ಜಿಕೆಯ ಒಳಗಡೆ ವಿದ್ಯುತ್ ಬಲ್ಬು ಹಚ್ಚುವರು. ಹೊರಗಡೆ ಪ್ರೇಕ್ಷಕರು ಕುಳಿತಲ್ಲಿ ಕತ್ತಲೆ ಇರುತ್ತದೆ.

ಒಟ್ಟಿನಲ್ಲಿ ತೊಗಲುಗೊಂಬೆಯಾಟ ಒಂದು ಅದ್ಭುತ ಕೈಚಳಕದ ಆಟ. ಈ ಆಟದವರು ಸೀತಾಸ್ವಯಂವರ, ದ್ರೌಪದಿ ಸ್ವಯಂವರ, ತ್ರಿಪುರ ಸಂಹಾರ, ಶ್ರವಣಕುಮಾರನ ತಂದೆತಾಯಿಗಳ ಭಕ್ತಿ ಮೊದಲಾದ ಪ್ರಸಂಗಗಳನ್ನು ಆಡಿ ಮನರಂಜನೆ ನೀಡುತ್ತಾರೆ. ತೊಗಲುಗೊಂಬೆಯ ಆಟ ಆಡಿಸಿದರೆ ಊರಿಗೆ ತಗಲಿದ ರೋಗರುಜಿನ ಹಾಗೂ ಅನಿಷ್ಟಗಳು ತೊಲಗುತ್ತವೆ ಎಂಬುದು

ಜನರ ನಂಬಿಕೆಯಾಗಿದೆ. ವಿಜಾಪುರ ಜಿಲ್ಲೆಯಲ್ಲಿ ಶ್ರೀ ಗಣಪತಿ ಹನುಮಂತ ಕಟಬರ ಬೀರಪ್ಪನಗರ. ಇಂಡಿ. ಜಿ. ವಿಜಾಪುರ ಇವರ ಒಂದು ಮೇಳವಿದೆ. ಈ ಕಲಾವಿದನು ದಿನಾಂಕ ೧-೧-೧೯೮೯ರಿಂದ ಕರ್ನಾಟಕ ಸರಕಾರದ ಮಾಸಾಶನ ಪಡೆಯುತ್ತಿದ್ದಾನೆ. ಈಗ ಇವನ ವಯಸ್ಸು ೮೨ಇದೆ. ಹಾಗೆಯೇ ಇಂಡಿ ತಾಲೂಕಿನ ಸಾರೋಟಗಿಯಲ್ಲಿ ಶ್ರೀ ಗಡ್ಡೆಪ್ಪ ಕಟವಾಜಿ ಕಟಬರ ಎಂಬವನ ಇನ್ನೊಂದು ತೊಗಲಗೊಂಬೆಯಾಟದ ಮೇಳವಿದೆ. ಈ ಜಿಲ್ಲೆಯಲ್ಲಿ ಇವೆರಡೇ ಮೇಳಗಳಿರುವುದು ಕಂಡುಬಂದಿದೆ.

## ರಾಧಾನಾಟ

ಇದು ಸಣ್ಣಾಟದ ಒಂದು ಪ್ರಕಾರವಾಗಿದೆ. ರಾಧಾನಾಟವು ಮಹಾರಾಷ್ಟ್ರದ ತಮಾಶಾದಿಂದ ಪ್ರೇರಣೆ ಪಡೆದು ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿಕೊಂಡಿತು. ದಾಸರಾಟಗಳು ಮಾಯವಾಗುತ್ತಿದ್ದ ಕಾಲಕ್ಕೆ ಸಣ್ಣಾಟದಲ್ಲಿಯೇ 'ರಾಧಾನಾಟ'ಎಂಬ ಹೊಸ ಪ್ರಕಾರ ತಲೆಯೆತ್ತಿತು. ತಮಾಶಾದ ಚಿಮಣಾ, ಗಲ್ಪೋಜಿ ಮತ್ತು ಸಖಾರಾಮ ತಾತ್ಯಾ ಇವು ರಾಧಾನಾಟಕ್ಕೆ ಆಮದಾದ ಪಾತ್ರಗಳು. ರಾಧಾನಾಟವು ಒಬ್ಬನ ಸೃಷ್ಟಿಯಾಗಿರದೆ ಹಲವಾರು ಜನರ ಸಮೂಹ ಸೃಷ್ಟಿ ಎಂದು ಹೇಳಬಹುದಾಗಿದೆ.

ರಾಧಾನಾಟವನ್ನು ಮೊದಲು ರಚಿಸಿದವ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಬಸರಗಿ ಗ್ರಾಮದ ಕುಂಬಾರ ಎಂದು ತಿಳಿಯುತ್ತದೆ. ಇವನು ರಚಿಸಿದ ಆಟಕ್ಕೆ 'ಬಸರಗಿ ಕುಂಬಾರನ ಆಟ'ವೆಂದೇ ಕರೆಯುತ್ತಿದ್ದರು. ಅನಂತರ ವಿಜಾಪುರ ಜಿಲ್ಲೆಯ ಬೀಬೀ ಇಂಗಳಗಿಯ ಹಸನಸಾಹೇಬನು ರಾಧಾನಾಟವನ್ನು ರಚಿಸಿದನು. ನಮ್ಮ ಜಿಲ್ಲೆಯಲ್ಲಿ ಇದೇ ಆಟವನ್ನು ಬಹುತೇಕ ಕಲಾವಿದರು ಆಡುತ್ತ ಬಂದಿದ್ದಾರೆ. ವಿಜಾಪುರ ಜಿಲ್ಲೆಯ ತಳೇವಾಡಿ ಗ್ರಾಮದ ನಬಿಸಾಹೇಬನು ಹಸನಸಾಹೇಬ ಬರೆದ ರಾಧಾನಾಟವನ್ನೇ ಆಡುತ್ತ ಹೆಸರುವಾಸಿಯಾಗಿ ಹೋಗಿದ್ದಾನೆ. ಇವನ ಜೊತೆಗೆ ಹುನಗುಂದ ತಾಲೂಕಿನ ಮರೋಳ ಗ್ರಾಮದ ಮೌಲ ಎಂಬ ಕಲಾವಿದನೂ ಆಟ ಆಡುತ್ತಿದ್ದನೆಂದು ಹೇಳಲಾಗುವದು. ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಸಗರಗಡ್ಡಿ

ಗ್ರಾಮದ ಇಮಾಮಸಾಹೇಬ ಎಂಬವನು ಇದೇ ರಾಧಾನಾಟದಲ್ಲಿ ರಾಧೆಯ ಪಾತ್ರಧಾರಿಯಾಗಿ ಕುಣಿಯುತ್ತಿದ್ದನೆಂದೂ ಅವನು ಪಾತ್ರ ಮಾಡುತ್ತಿದ್ದಾಗ ಥೇಟ ಹೆಣ್ಣೇ ಎಂದು ಜನ ಮರುಳಾಗುತ್ತಿದ್ದರೆಂದೂ ತಿಳಿದಿದೆ. ಆ ಕಾಲದಲ್ಲಿ ರಾಧಾನಾಟವು ಜನರಿಗೆ ಬಹಳ ಆಕರ್ಷಕವಾದ ಆಟವಾಗಿತ್ತೆಂದು ಹೇಳುವರು. ಬೀಬೀ ಇಂಗಳಗಿಯ ಹಸನ ಸಾಹೇಬನು ೧೮೫೮ ರಲ್ಲಿ ಜನಿಸಿ ೬೦ ವರುಷ ಬದುಕಿ ೧೯೧೮ರಲ್ಲಿ ಪೈಗಂಬರ ವಾಸಿಯಾದನೆಂದು ಗೊತ್ತಾಗಿದೆ. ಹದಿಮೂರು ದಿವಸ ಮೊದಲೇ ತನ್ನ ಸಾವಿನ ಸುಳಿವನ್ನು ಕಂಡ ಹಸನನು ಆ ಕುರಿತು ಒಂದು ಲಾವಣಿಯನ್ನೇ ರಚಿಸಿದ್ದಾನೆ. ಇವನು ಮಹಮ್ಮದೀಯ ಧರ್ಮದವನು. ಇವನ ತಂದೆ ಮಮ್ಮಾಸಾಹೇಬ, ತಾಯಿ ಕುಸುಂಬಿ. ಹಸನಸಾಹೇಬನು ದೇವಿಯ ಉಪಾಸಕನಾಗಿ ಹೆಚ್ಚಾಗಿ ಹಿಂದೂ ಜನರೊಡನೆಯೇ ಸಂಬಂಧವಿರಿಸಕೊಂಡಿದ್ದನು. ಇವನು ಕನ್ನಡ ೫ನೇ ಇಯತ್ತೆಯ ವರೆಗೆ ಮಾತ್ರ ಕಲಿತವನು. ಮರ್ತುಜ ಬಿಲಜಿ ಎಂಬವರು ಇವನಿಗೆ ಧರ್ಮದೀಕ್ಷೆ ಕೊಟ್ಟ ಗುರುಗಳು. ಪಂಡಿತರಾದ ಗುರುಬಸಯ್ಯ ಮತ್ತು ಬಸಪ್ಪ ಎಂಬವರು ಹಸನಸಾಹೇಬನ ಸಹಪಾಠಿಗಳಾಗಿದ್ದರು. ಹಸನನೂ ಚುರುಕುಬುದ್ಧಿಯವನಾಗಿದ್ದನು. ದೇವಿಯು ಒಮ್ಮೆ ಹಸನ ಸಾಹೇಬನ ಕನಸಿನಲ್ಲಿ ಬಂದು 'ನೀನು ಹಾಡು ರಚಿಸು, ನಿನಗೆ ಸರಿಸಮಾನರು ಯಾರೂ ಇಲ್ಲ. ನೀನು ರಚಿಸುವ ಹಾಡುಗಳ ಕೊನೆಗೆ ಅಂಕಿತದಲ್ಲಿ ನಿನ್ನ ಹೆಸರಿನ ಮೊದಲು ಇನ್ನೊಬ್ಬರದನ್ನು ಸೇರಿಸು' ಎಂದು ಹೇಳಿದ್ದರಿಂದ ತುಂತುಣಿ ಬಾರಿಸುವಲ್ಲಿ ತನಗೆ ಸಹಾಯಕನಾಗಿದ್ದ ನಾಗರಾಳದ ತಳವಾರ ಮಲ್ಲನ ಹೆಸರನ್ನು ಸೇರಿಸಿಕೊಂಡು 'ಮಲ್ಲಹಸನ' ಎಂಬ ಅಂಕಿತ ಬಳಸಿಕೊಂಡದ್ದನ್ನು ಕಾಣುತ್ತೇವೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳೆರಡರಲ್ಲೂ ಹಸನನು ಸುಪ್ರಸಿದ್ಧ ಲಾವಣಿಕಾರನಾಗಿದ್ದನೆಂದು ತಿಳಿದುಬರುತ್ತದೆ. ಈತನ ಮನೆದೇವರು ಬಡೇಸಾಬ ವೀರ ಎಂಬುದಾಗಿತ್ತು.

ರಾಧಾನಾಟಕ್ಕೆ ಕೃಷ್ಣನ ರಾಸಲೀಲೆಯಿಂದ ಮೂಲ ಪ್ರೇರಣೆ ದೊರೆತಿದೆ. ಶೃಂಗಾರ, ಹಾಸ್ಯ, ಭಕ್ತಿ ರಸಗಳು ರಾಧಾನಾಟದಲ್ಲಿ ಚೆಲ್ಲವರಿದು ಈ ಆಟವು ಆ ರಸಗಳ ತ್ರಿವೇಣಿ ಸಂಗಮವಾಗಿದೆ. ಜನಪದರ ಆಡುಭಾಷೆ, ಇಲ್ಲಿ

ಹಾಸುಹೊಕ್ಕಾಗಿದೆ. ಸಹಜ ಪ್ರತಿಭೆಯ, ಸೊಗಸಿನ ನಾದಮಾಧುರ್ಯದ ಹಾಡುಗಳಿಂದ ಕಥೆಗೆ ಮತ್ತಷ್ಟು ಮೆರುಗುಬಂದಿದೆ. ಸ್ತ್ರೀ ಪಾತ್ರಗಳನ್ನು ದೇವದಾಸಿಯರು ಅಭಿನಯಿಸುತ್ತ ಬಂದುದರಿಂದ ರಾಧಾನಾಟಕ್ಕೆ ವಿಶೇಷ ಕಳೆ ಬಂದಿದೆ. ಸಣ್ಣಾಟಗಳಲ್ಲಿ ಡಪ್ಪು ಮುಖ್ಯ ವಾದ್ಯವಾಗಿರುವದರಿಂದ ಈ ಆಟಕ್ಕೆ 'ಡಪ್ಪಿನಾಟ' ಎಂದೂ ಹೆಸರಿದೆ.

ಬೀಬಿ ಇಂಗಳಗಿಯ ಶ್ರೀ ಮಲಕಪ್ಪ ಗುರಪ್ಪ ಬೇಲೂರ ಎಂಬುವರು ಸಣ್ಣಾಟದ ಒಂದು ಸಂಘ ಕಟ್ಟಿಕೊಂಡು ಹಸನಸಾಹೇಬನ ರಾಧಾನಾಟವನ್ನು ಪ್ರದರ್ಶಿಸುತ್ತ ಬಂದಿದ್ದಾರೆ. ಈ ಸಂಘದಲ್ಲಿ ಎಂಟು ಜನ ಕಲಾವಿದರಿದ್ದಾರೆ.

ಇದಲ್ಲದೆ ನಮ್ಮ ಜಿಲ್ಲೆಯ ದೇವಣಗಾಂವ, ಸಾಲೋಟಗಿ, ಸಾರವಾಡ, ಕನ್ನೂರ, ಹೆಬ್ಬಾಳಟ್ಟಿ, ಸವನಳ್ಳಿ ಮೊದಲಾದ ಊರುಗಳಲ್ಲಿ ಸಣ್ಣಾಟಗಳ ಹವ್ಯಾಸಿ ಕಲಾತಂಡಗಳಿವೆ.

## ಕೌದಿ-ಕಸೂತಿ

ಕೌದಿಯು ಜನಪದರ ಅಪರೂಪದ ಕಲಾವಸ್ತು. ಕೆಳಗೆ ಹಳೆಯ ದೋತರ ಇಲ್ಲವೆ ಸೀರೆಯ ಎರಡು ಮೂರು ಪದರುಗಳನ್ನು ಜೋಡಿಸಿ ದೂರ ದೂರ ಹೊಲಿಗೆ ಹಾಕುವರು. ಇದಕ್ಕೆ 'ಲ್ಯಾವಿ' ಮಾಡುವದು ಎನ್ನುತ್ತಾರೆ. ಇದರ ಮೇಲೆ ಗಟ್ಟಿಯಾದ ಇಲ್ಲವೆ ಹೊಸ ತುಂಡು ಬಟ್ಟೆಗಳನ್ನು ಕಲಾತ್ಮಕವಾಗಿ ಜೋಡಿಸುತ್ತ ಸಣ್ಣ ಹೊಲಿಗೆ ಹಾಕುತ್ತ ಮುಗಿಸುವರು. ಇದೇ ಕೌದಿ. ಕೌದಿಯ ಹೊಲಿಗೆಗಳಲ್ಲಿ ಸ್ತ್ರೀಯರು ಹಕ್ಕಿಯಕಾಲು ಪಗಡಿವಟ್ಟ, ಬಾರಂಗಬಾವಿ, ಗೋಪುರಗಳನ್ನು ಬಿಡಿಸುತ್ತಾರೆ. ಇದು ದಪ್ಪವಾಗಿದ್ದು ಚಳಿಯಿಂದ ರಕ್ಷಿಸುತ್ತದೆ. ದೊಡ್ಡ ಕೌದಿ ನಾಲ್ಕಾರು ಜನರಿಗೆ ಹೊದ್ದುಕೊಳ್ಳಲು ಸಾಲುವಂತಿರುತ್ತದೆ. ಮಕ್ಕಳಿಗಾಗಿ ಹಾಸಲು ಹೊಚ್ಚಲು ಚಿಕ್ಕಗಾತ್ರದ ಇಂತಹದೇ ವಸ್ತು ತಯಾರಿಸುವರು. ಇದಕ್ಕೆ 'ದುಬಟಿ' ಎಂದು ಹೆಸರು. ಕೌದಿ ಬೆಚ್ಚಗಿರುವದನ್ನು 'ಜಗದ್ಗುರು ಜಗದೀಶ, ಥಂಡಿಗುರು ಕೌದೀಶ' ಎಂಬ ಗಾದೆ ಸಾರಿ ಹೇಳುತ್ತದೆ.

ಬಣ್ಣಬಣ್ಣದ ದಾರ ಮತ್ತು ಸೂಜಿಯಿಂದ ಬಟ್ಟೆಯ ಮೇಲೆ ಬಿಡಿಸಿದ ಚಿತ್ರಗಳಿಗೆ 'ಕಸೂತಿಕಲೆ' ಎಂದು ಹೆಸರು. ಇದೊಂದು ಪ್ರಾಚೀನ ಕರಕುಶಲಕಲೆ.

ಮಿರುಗುವ ರೆಕ್ಕೆ ಕನ್ನಡಿಯ ಚೂರುಗಳನ್ನು ಅಳವಡಿಸಿದ ಕಸೂತಿ ಕಲೆಯ ಅವಶೇಷಗಳು ಇಂದಿಗೂ ಕೆಲವೆಡೆ ದೊರೆಯುತ್ತವೆ. ಈ ಕಲೆಯಲ್ಲಿ ನಯನಾಜೂಕುಗಳು ಎದ್ದುಕಾಣುವ ಅಂಶಗಳು. ಕರಿಚಂದ್ರಕಾಳಿ ಸೀರೆಯ ತುಂಬ ಕಸೂತಿ ಕಲೆಯನ್ನು ಪ್ರದರ್ಶಿಸುವದನ್ನು ವಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಕಾಣುತ್ತೇವೆ. ಲಂಬಾಣಿ ಸ್ತ್ರೀಯರ ಉಡುಪು ಕಸೂತಿಕಲೆಗೆ ಪ್ರತ್ಯಕ್ಷ ನಿದರ್ಶನ. ಹಾಗೆಯೇ ನಮ್ಮ ಗರತಿಯರು ಮುದ್ದು ಮಗುಗಳ ಕುಲಾಯಿ, ಕುಂಚಿಗೆಗಳಿಗೆ ಮುತ್ತುಗಳನ್ನು ಹಚ್ಚಿ ಕಸೂತಿಯಿಂದ ಕಲಾಮಯವಾಗಿಸುವರು.

**ಆಭರಣಗಳು:** ನಮ್ಮ ಜಿಲ್ಲೆಯ ಕರಕುಶಲ ವಸ್ತುಗಳಲ್ಲಿ ವಿಶೇಷ ಗಮನ ಸೆಳೆಯುವ ವಸ್ತುಗಳೆಂದರೆ ಹಲವು ಬಗೆಯ ಆಭರಣಗಳು. ಇವಕ್ಕೆ 'ಅಲಂಕಾರಗಳು' ಎಂಬ ಇನ್ನೊಂದು ಹೆಸರೂ ಇದೆ. ಆಭರಣಗಳನ್ನು ಸಾಮಾನ್ಯವಾಗಿ ಬೆಳ್ಳಿ ಬಂಗಾರದಿಂದ ತಯಾರಿಸುವರು. ಕೆಲವು ಆಭರಣಗಳಗೆ ಮುತ್ತು ಹರಳುಗಳನ್ನು ಜೋಡಿಸಲಾಗುತ್ತದೆ. ಆಭರಣಗಳು ಸೌಂದರ್ಯವನ್ನು ಅಧಿಕಗೊಳಿಸುವ ಸಾಧನಗಳು. ಸಾಮಾನ್ಯವಾಗಿ ಹೆಣ್ಣುಮಕ್ಕಳ ಆಭರಣಗಳೇ ಹೆಚ್ಚು. ಸ್ತ್ರೀಯರು ಬೈತಲೆಸರ, ಪದಕ, ಬುಗುಡಿ, ಬೆಂಡವಾಲೆ, ಗುಬ್ಬಬಾಳ, ತಾಲೂಕ, ದ್ರಾಪಿಪಟ್ಟಿ, ಸಿಂಗಾರಸರ, ಪುತಳೀಸರ, ಗೆಜ್ಜಿಟಿಕ್ಕೆ, ಗುಂಡಿನ ಟಿಕ್ಕೆ, ಬೋರಮಾಳ, ಚಂದ್ರಹಾರ, ಮೋಹನಮಾಳ, ಚಿಂತಾಕು, ನತ್ತು, ಮೂಗುತಿ, ಬುಲಾಕ, ಗೋಟು, ಪಾಟಲಿ, ಬಂಗಾರಬಿಳಿ, ಬಾಜುಬಂದ, ನಾಗಮುರಗಿ, ವಂಕಿ, ಡಾಬ, ಕಾಲುಂಗರ, ಮೀನಪಿಲ್ಲೆ, ಕಳಾವಾರಪಿಲ್ಲೆ, ರುಳಿ, ಪೈಜಣ ಮುಂತಾದ ಆಭರಣಗಳನ್ನು ಧರಿಸುತ್ತಿದ್ದರು. ಪುರುಷರು ಮುರುವು, ಬಾವಲಿ, ಪೋಚೆ, ಉಂಗುರ ಧರಿಸುವದು ಸಾಮಾನ್ಯವಾಗಿತ್ತು. ಮಕ್ಕಳ ಕುಲಾವಿಗೆ ಜುಲುಪಿ ಹೂವು, ನಾಗ, ಗುಲಾಬಿ ಹೂವು, ಮಕ್ಕಳಿಗೆ ಬಿಂದಲಿ, ಗುಂಡು, ಖಡೆ, ಉಂಗುರ, ಉಡದಾರ, ಹಾಲ್ಗಡಗ, ತೋಡೆ ಹಾಕುತ್ತಿದ್ದರು. ಈ ಆಭರಣಗಳ ತಯಾರಿಕೆಯಲ್ಲಿ ಅಕ್ಕಸಾಲಿಗನ ಕಲಾಕೌಶಲ್ಯ ಕಾಣುತ್ತೇವೆ. ಇವೆಲ್ಲ ಕರಕುಶಲ ಕಲೆಯ ಆಭರಣಗಳು.

## ಬಡಿಗ, ಕುಂಬಾರರ ಕರಕುಶಲ ವಸ್ತುಗಳು

ಬಡಿಗನು ಕಟ್ಟಿಗೆಯಲ್ಲಿ ಅನೇಕ ನಿತ್ಯೋಪಯೋಗಿ ಉಪಕರಣಗಳನ್ನು ತಯಾರಿಸಿ ಅದರಲ್ಲಿ ಕಲೆಯನ್ನು ಅಳವಡಿಸಿದ್ದಾನೆ. ಅಂತಹ ಉಪಕರಣಗಳಲ್ಲಿ ಮುಕ್ಕಾಲುಮಣೆ (ತೇವಟಿಗೆ), ಕಡಗೋಲು (ಮಂತ), ವಿವಿಧ ಚೌಕಿ ಮಣಿಗಳು, ಕಟ್ಟಗೆಯ ಕಪಾಟುಗಳು, ತೋಟ್ಟಿಲುಗಳು, ಮಕ್ಕಳ ಆಟಿಗೆಗಳು, ಹುಟ್ಟು, ಕೊಣಮಿಣಿ, ಚಾಪಾತಿಮಣೆ, ಲಟ್ಟಣಿಗೆ, ಒನಕೆ, ಗಾಲಿಯಮೇಲೆ ಉರುಳುತ್ತ ಸಾಗುವ ವಿಭೂತಿ ಪೆಟ್ಟಿಗೆ, ತೇರು, ಕಟ್ಟಿಗೆಯ ಮಂಚ, ಹೊರಸಿನ ಕಾಲುಗಳು, ಒಕ್ಕಲುತನದ ಉಪಕರಣಗಳು ಇವನ್ನು ಹೆಸರಿಸಲಾಗುವದು. ಇವೆಲ್ಲ ಕಲಾತ್ಮಕವಾಗಿ ಮನಸ್ಸಿಗೆ ಮುದನೀಡುತ್ತವೆ.

ಮಣ್ಣಿನಿಂದ ಮಡಿಕೆ, ಕುಡಿಕೆಗಳನ್ನು ತಯಾರಿಸುವ ಕಂಬಾರ ಒಬ್ಬ ಕರಕುಶಲ ಕಲಾವಿದ. ನಮ್ಮ ಜಿಲ್ಲೆಯ ಹಳ್ಳಿಗರ ದೊಡ್ಡ ಮನೆತನಗಳಲ್ಲಿ 'ಅಡಕಲಸಾಲು' ಕಾಣುತ್ತವೆ. ಒಂದರ ಮೇಲೊಂದರಂತೆ ಐದು ಮಣ್ಣಿನ ಹರವಿಗಳನ್ನು ಐದು ಸಾಲುಗಳಲ್ಲಿ ಒಟ್ಟಿರುತ್ತಾರೆ. ಕೆಳಗಿನಿಂದ ಮೇಲಕ್ಕೆ ಹೋದಂತೆ ಈ ಹರವಿಗಳು ಚಿಕ್ಕದಾಗುತ್ತ ಹೋಗಿ ಎಲ್ಲಕ್ಕೂ ಮೇಲೆ ಒಂದು ಬಿಂದಿಗೆಯಾಕಾರದ ಪಾತ್ರೆಯಿದ್ದು, ಅದರ ಮೇಲೆ ಮಣ್ಣಿನ ಕಳಸವಿರುವದು. ಈ ಅಡಕಲ ಸಾಲುಗಳು ದೇವರ ಮನೆಯಲ್ಲಿ ಗೋಡೆಗೆ ಹೊಂದಿ ಇರುವ ಕಟ್ಟೆ (ಕಣತಲ)ದ ಮೇಲಿರುತ್ತವೆ. ಇವುಗಳ ಮೇಲೆ ಕುಂಬಾರನು ಕಲೆಯನ್ನು ಬಿಡಿಸಿರುತ್ತಾನೆ. ಇವು ಆಗಿನ ಕಾಲದ ಹಳ್ಳಿಗರ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಡುವ ತಾಣಗಳು. ಇವಲ್ಲದೆ ಕುಂಬಾರನು ರಂಜಣಿಗೆ, ಕುಡಿಕೆ, ಪರಿಯಾಣ, ಹೂಜಿ, ಮಗಿ, ತತ್ರಾಣಿ, ಪಣತಿ ಮೊದಲಾದ ವಸ್ತುಗಳು ಕಲಾತ್ಮಕವಾಗಿ ಮಾಡಿದ್ದುಂಟು.

ಹಗ್ಗ ಇಲ್ಲವೆ ಒಂದು ತರದ ಹುಲ್ಲಿನಿಂದ ಜನಪದರು ತಯಾರಿಸಿದ ನೆಲವುಗಳೂ ಕಲಾತ್ಮಕವಾಗಿದ್ದು ಇವುಗಳ ಮೇಲೆ ಹಾಲುಮೊಸರಿನ ಗಡಿಗೆಗಳನ್ನು ಇಡುತ್ತಿದ್ದರು.

**ರಂಗವಲ್ಲಿ:** (ರಂಗೋಲಿ): ಇದು ನಮ್ಮ ಜಿಲ್ಲೆಯ ಜನಪದ ಗರತಿಯರ ಇನ್ನೊಂದು ಕರಕುಶಲಕಲೆ. ಮದುವೆ, ಮುಂಜಿವೆ, ಹಬ್ಬ-ಹರಿದಿನ, ಸ್ವಾಮಿಗಳ

ಆಗಮನದ ಸಂದರ್ಭಗಳಲ್ಲಿ ವಿವಿಧ ವಿನ್ಯಾಸದ ರಂಗವಲ್ಲಿ ಕಂಡುಬರುತ್ತದೆ. 'ಬಿಂಜಾಳ' ಎಂಬ ಬಿಳಿಯ ಕಲ್ಲಿನ ಪುಡಿಯನ್ನು ರಂಗವಲ್ಲಿಗಾಗಿ ಉಪಯೋಗಿಸುತ್ತಾರೆ. ರಂಗವಲ್ಲಿಯಲ್ಲಿ ಎರಡು ಪ್ರಕಾರಗಳಿವೆ. ಚುಕ್ಕೆಗಳನ್ನು ಇಟ್ಟು ಎಳೆಗಳನ್ನು ಎಳೆಯುವದು ಒಂದು ರೀತಿ. ಅಕ್ಕಿಯನ್ನಿಟ್ಟು ಮನಬಂದಂತೆ (Free Style) ಚಿತ್ರ ಬರೆಯುವದು ಇನ್ನೊಂದು ರೀತಿ. ಮೊದಲನೆಯದನ್ನು 'ಎಳೆರಂಗವಲ್ಲಿ' ಎಂದೂ, ಎರಡನೆಯದನ್ನು 'ಭೂಮಿತಿ ರಂಗವಲ್ಲಿ' ಎಂದೂ ಕರೆಯಲಾಗುತ್ತದೆ. ಹಿಂದಿನ ಕಾಲದಲ್ಲಿ ಪಚ್ಚೆ, ವಜ್ರ, ಮಾಣಿಕದ ಪುಡಿಗಳಿಂದ ರಂಗವಲ್ಲಿ ಹಾಕುತ್ತಿದ್ದರಂತೆ. ಇತ್ತೀಚೆಗೆ ಶಾಲಾ ಕಾಲೇಜುಗಳಲ್ಲಿ ರಂಗವಲ್ಲಿ ಸ್ಪರ್ಧೆ ಏರ್ಪಡಿಸಿ ಈ ಕಲೆಗೆ ಪ್ರೋತ್ಸಾಹ ನೀಡಲಾಗುತ್ತದೆ.

**ಇತರ ಕಲಾ ವಸ್ತುಗಳು:** ಮನೆಗಳ ಛತ್ತದ ತೊಲೆ, ಕಂಬ, ಜಂತಿಗಳ ವಿನ್ಯಾಸ ಹಾಗೂ ಕೆತ್ತನೆಯ ಕೆಲಸದಿಂದಾಗಿ ಅದು ಕರಕುಶಲಕಲೆ ಎನಿಸಿಕೊಳ್ಳುತ್ತದೆ. ಪಡಸಾಲೆಯ ಮುಂಭಾಗದಲ್ಲಿ ವಿವಿಧ ವಿನ್ಯಾಸಗಳು, ಕಂಬ-ಬೋದುಗೆಗಳಲ್ಲಿ ನಕ್ಷೆಗಳು, ಎದುರಿನ ಮಾಡದ ಚೌಕಟ್ಟಿಗೆ ಸುಳುವು ಇತ್ಯಾದಿ ಇರುವದು ವಾಡಿಕೆ. ತಲಬಾಗಿಲು ದೊಡ್ಡದಿದ್ದು ಅದರ ಚೌಕಟ್ಟಿನ ಮೂರೂ ಬದಿಗಳಲ್ಲಿ ನಾನಾ ಬಗೆಯ ಸುಳುವುಗಳು, ಮೃಗ ಪಕ್ಷಿಗಳು, ಎಲೆ-ಬಳ್ಳಿಕಾಯಿಗಳು, ದೇವದೇವತೆಗಳ ಹಲವು ಭಂಗಿಗಳು ಇರುವದುಂಟು. ಕೆಳಗಿನ ಹೊಸ್ತಿಲವೂ ಅಲಂಕಾರದಿಂದ ಕೂಡಿರುವರು.

ವಿವಿಧ ಗಾತ್ರದ ಹಾಗೂ ವಿವಿಧ ವಿನ್ಯಾಸಗಳುಳ್ಳ ಬೀಸುವ ಕಲ್ಲುಗಳು ಕಲ್ಕುಟಿಕನ ಕುಶಲಕಲೆಯನ್ನು ಸಾರುತ್ತವೆ. ಅಡಕೊತ್ತುಗಳಲ್ಲಿ ಬಗೆಬಗೆಯ ನಮೂನೆಗಳಿವೆ. ಅವುಗಳಲ್ಲಿ ಗಿಳಿಮೂಗಿನಂತಿರುವ, ಕುದುರೆ ಸವಾರರ ವಿನ್ಯಾಸವುಳ್ಳ, ಪರಸ್ಪರರನ್ನು ಅಪ್ಪಿ ಚುಂಬಿಸುವ ಪ್ರೇಮಿಗಳ ಕೆಲವನ್ನು ಹೆಸರಿಸಬಹುದು.

ಸುಣ್ಣದ ಡಬ್ಬಿ (ಸುಣ್ಣದಕಾಯಿ)ಗಳಲ್ಲಿಯೂ ವೈವಿಧ್ಯತೆಯಿರುವದುಂಟು. ಇದು ಸುಣ್ಣಕ್ಕಾಗಿ ಎಲೆ ಸಂಚಿಯಲ್ಲಿ ಇರುವ ವಸ್ತು. ಇದು ಹಿತ್ತಾಳೆಯದಾಗಿದ್ದು ಸರಪಳಿಯನ್ನು ಜೋಡಿಸಿ, ಮೇಲೆ ಕನ್ನಡಿಯನ್ನು ಅಳವಡಿಸಿ, ಸುತ್ತಲೂ ನಕ್ಷೆ ಬಿಡಿಸಿರುತ್ತಾರೆ. ಎಲೆಸಂಚಿ ಸಿಂಪಿಗನ ಕರಕುಶಲವಸ್ತು. ಇದರಲ್ಲಿ ನಾಲ್ಕಾರು

ಭಾಗಗಳನ್ನು ಮಾಡಿ, ಸರಕು ಜಗ್ಗಿ ಸೊಂಟಕ್ಕೆ ನೇತು ಬಿಡಲು ಬರುವಂತಿರುತ್ತದೆ. ಅದು ಕೆಂಪು ಬಣ್ಣದಿಂದ ಕೂಡಿದ್ದು ಅದರ ಮೇಲೆ ಸಿಂಪಿಗನ ಕಲೆ ಇರುತ್ತದೆ. ಕುಟ್ಟಣ (ಕಲಬತ್ತು) ಎಲೆ ಅಡಿಕೆ ಕುಟ್ಟುವ ಕಲಾತ್ಮಕ ಅಪರೂವದ ವಸ್ತು.

ತೊಟ್ಟಲು ಮಗುವನ್ನು ತೂಗಿ ಮಲಗಿಸುವ ಸಾಧನ. ಅದರ ಮೇಲೆ ಕಟ್ಟಿದ 'ಗುಬ್ಬಿಯ ಛತ್ತು' (ಗುಬ್ಬಿಯ ಚಿಟ್ಟು) ಇನ್ನೂ ಕಲಾತ್ಮಕವಾಗಿರುತ್ತದೆ. ಗುಬ್ಬಿಗಳನ್ನು ಕಲಾತ್ಮಕವಾಗಿ ಹೆಣೆದು ಸಮಾನಾಂತರದಲ್ಲಿ ಅಳವಡಿಸಿ ಅದಕ್ಕೆ ಮುತ್ತು ಕಾಜಿನ ನಳಿ, ಬಿಲ್ವಾರ ಹಂಡೆಗಳನ್ನು ಅಲ್ಲದೆ ಮಿಂಚುವ ಟಿಕಳಿಗಳನ್ನು ಜೋಡಿಸಿರುತ್ತಾರೆ. ಇದೊಂದು ಮಕ್ಕಳ ಕೃತ್ರಿಮ ಆಕಾಶ. ತೊಟ್ಟಿಲು ತೂಗುವಾಗ ಇದನ್ನು ನೋಡುವ ಮಗುವಿಗೆ ಉತ್ಸಾಹ, ಆನಂದ!

ಬಯಲಾಟದ ವೇಷ ಭೂಷಣಗಳು ತುಂಬಾ ಕಲಾತ್ಮಕವಾಗಿರುತ್ತವೆ. ಕಂಚಿನ ಮತ್ತು ಹಿತ್ತಾಳೆಯ ಪಾತ್ರೆಪಡಗಗಳು, ವಿವಿಧ ಆಯುಧಗಳು, ಜತಿಗೆಯಂತಹ ಹೆಣಿಕೆ ವಸ್ತುಗಳು, ಹೊಟ್ಟು ತುಂಬುವ ಜಾಳಿಗೆಗಳು, ಹೀಗೆಯೇ ಕರಕುಶಲ ಕಲೆಗಳ ಯಾದಿಯನ್ನು ಹಿಗ್ಗಿಸಬಹುದಾಗಿದೆ.

ಬೀರಬಾಟ್ಲಯಲ್ಲಿ ಒಕ್ಕಲುತನದ ಉಪಕರಣವಾದ ಚಕ್ಕಡಿಯನ್ನು ಕಲಾತ್ಮಕವಾಗಿ ಅಳವಡಿಸಿರುವ, ಅಂತಹದೇ ಬೀರಬಾಟ್ಲಿಯಲ್ಲಿ ನೊಗಸಹಿತ ಕೂರಿಗೆ ದಿಂಡನ್ನು ಅಳವಡಿಸಿರುವ ಸಾರೋಟಿಗಿ (ತಾ. ಇಂಡಿ) ಯ ಕಲಾವಿದ ಶ್ರೀ ಶಾಮರಾಯ ಗೂಳಪ್ಪ ಬಡಿಗೇರ ಇವರ ಕಲೆ ಅಚ್ಚರಿ ಮೂಡಿಸುವಂತಹದು, ಈ ಕಲಾವಿದ ದಿನಾಂಕ ೩-೭-೨೦೦೧ರಿಂದ ಕರ್ನಾಟಕ ಸರಕಾರದ ಗೌರವ ಮಾಸಾಶನ ಪಡೆಯುತ್ತಿದ್ದಾನೆ. ಜಾನಪದ ಲೋಕ ಪ್ರಶಸ್ತಿಯನ್ನೊಳಗೊಂಡು ಅನೇಕ ಪ್ರಶಸ್ತಿಗಳನ್ನು ಈ ಕಲಾವಿದ ತನ್ನದಾಗಿಸಿಕೊಂಡಿದ್ದಾನೆ. ಒಕ್ಕಲುತನದ ಉಪಕರಣಗಳನ್ನು ಕಲಾತ್ಮಕವಾಗಿ ಮಾಡುವದಲ್ಲದೆ ಸಾಗವಾನಿ ತುಂಡಿನಿಂದ ಲಿಂಗದಕಾಯಿ (ಗುಂಡಗಡಿಗೆ) ಯನ್ನು ಸುಂದರವಾಗಿ ನಿರ್ಮಿಸುತ್ತಾನೆ. ಇವನ ಕಲೆಯನ್ನು ಪ್ರತ್ಯಕ್ಷ ನೋಡಿಯೇ ಆನಂದಿಸಬೇಕು.

ಕೊಂಬು ಉಸಿರುಕಲೆ. ಕೊಂಬು ಕಹಳೆ ಜೊತೆಯಾಗಯೇ ಬಳಸುವ

ವಾಡಿಕೆಯಿದೆ. ಹಿಂದೆ ರಾಜ ಮಹಾರಾಜರ ಕಾಲದಲ್ಲಿ ರಣಕಹಳೆ ಬಳಕೆಯಲ್ಲಿತ್ತು. ಕೋಟೆಯ ಬುರುಜದ ಮೇಲೆ ಎತ್ತರದಲ್ಲಿ ನಿಂತು ಕಾವಲುಗಾರ ದೂರದಿಂದಲೇ ಶತ್ರುಗಳ ಆಗಮನವನ್ನು ಕಂಡು ಕೊಂಬುಊದಿ ಕೋಟೆಯೊಳಗಿನ ಸೈನಿಕರನ್ನು ಎಚ್ಚರಗೊಳಿಸುತ್ತಿದ್ದನಂತೆ. ಯುದ್ಧದಲ್ಲಿಯೂ ಕೊಂಬಿನ ಧ್ವನಿ ಸೈನಿಕರಿಗೆ ಸ್ಫೂರ್ತಿನೀಡುತ್ತಿತ್ತು. ಮದುವೆಯ ಕಾಲದಲ್ಲಿ, ಮಠಮಂದಿರಗಳಲ್ಲಿ ಪೂಜೆಯ ಕಾಲದಲ್ಲಿ, ಗುರುಗಳ ಹಾಗೂ ರಾಜಕೀಯ ಧುರೀಣರ ಮೆರವಣಿಗೆಯಲ್ಲಿ ಕೊಂಬು ಕಲೆಯ ಪ್ರದರ್ಶನ ಜರುಗುತ್ತದೆ. ಇತ್ತೀಚೆಗೆ ಈ ಕಲಾವಿದರ ಸಂಖ್ಯೆ ಇಳಿಮುಖವಾಗುತ್ತಲಿದೆ. ನಮ್ಮ ಜಿಲ್ಲೆಯಲ್ಲಿ ಮಕಣಾಪುರ (ತಾ. ವಿಜಾಪುರ) ದ ಶ್ರೀ ಸೋಮಲಿಂಗ ಈಶ್ವರಪ್ಪ ತಳಕಡೆ, ಜಾಲಗೇರಿ (ತಾ. ವಿಜಾಪುರ) ದುಂಡಪ್ಪ, ಆಹೇರಿ (ತಾ. ವಿಜಾಪುರ) ದುರಗಪ್ಪ, ಸಾರವಾಡ ಚಿದಾನಂದ ಮೊದಲಾದವರು ಈ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಕಲಾವಿದರೆಲ್ಲ ಸಾಮಾನ್ಯವಾಗಿ ಹಿಂದುಳಿದ ವರ್ಗದವರು. ಕೊಂಬು ಊದುವವನಿಗೆ ಶಕ್ತಿ ಹಾಗೂ ದೀರ್ಘ ಉಸಿರುಬೇಕು. ಇದು ಅಭ್ಯಾಸದಿಂದ ಸಾಧಿಸುವ ಕಲೆಯಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ಹಲಸಂಗಿ ಖಾಜಾಭಾಯಿ, ಹಲಸಂಗಿ ಪಿ. ಧೂಲಾಸಾಹೇಬರಂತಹ ಅಪ್ರತಿಮವರು ಲಾವಣಿ ಕವಿಗಳಾಗಿ ಹೋದುದು, ಶ್ರೀಮತಿ ಗೌರಮ್ಮ ಮಾದರ, ಶ್ರೀಮತಿ ಗೌರಮ್ಮ ಶೆಟ್ಟಪ್ಪ ಚಲವಾದಿ ಇಂತಹ ಚೌಡಿಕೆ ಹಾಗೂ ಜನಪದ ಹಾಡುಗಾರ್ತಿಯರಾಗಿ ಹೋದುದು, ಡಾ. ಸಿಂಪಿಲಿಂಗಣ್ಣ, ಶ್ರೀ ಎಚ್. ಎಲ್. ನಾಗೇಗೌಡ, ಜೀಶಂಪ ಅವರಂತಹ ಜಾನಪದ ಸಾಹಿತಿಗಳಾಗಿ ಹೋದುದು ಈ ಜಿಲ್ಲೆಯ ಜಾನಪದದ ಶ್ರೀಮಂತಿಕೆಗೆ ಸಾಕ್ಷಿಯಗಿದೆ. ಈ ಪಟ್ಟಿ ನೆನಪಿಸಿಕೊಂಡಂತೆ ಬೆಳೆಯುತ್ತಲೇ ಹೋಗುತ್ತದೆ. ನಮ್ಮ ಜಿಲ್ಲೆ ಜಾನಪದದ ಖಣಿ. ಇಲ್ಲಿ ಅಗಿದಷ್ಟು ಜನಪದ ಸಾಹಿತ್ಯ ಮತ್ತು ಕಲೆಗಳು ಸಿಗುತ್ತವೆ. ಇಂತಹ ಶ್ರೀಮಂತ ಪರಂಪರೆಯ ಜಿಲ್ಲೆ ನಮ್ಮದು.

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಸಮೃದ್ಧವಾದ ಜನಪದ ಕಲೆಗಳಿವೆ; ಕಲಾವಿದರಿದ್ದಾರೆ. ಮೌಖಿಕ ಪರಂಪರೆಯಲ್ಲಿ ಹುಟ್ಟಿಕೊಂಡ ಕಲೆಗಳು ನಿರಂತರವಾಗಿ ಮುಂದುವರೆದಿವೆ. ಕಲೆಯ ಹುಟ್ಟಿಗೆ ಕಾರಣರಾದ ಕಲಾವಿದರು ಕಣ್ಮರೆಯಾಗುತ್ತಾರೆ; ಅದೇ ಮೂಲದ ಇನ್ಯಾರೋ ಅಭಿಜಾತ ಕಲೆಯನ್ನು ಮುಂದುವರಿಸುತ್ತಾರೆ. ಒಮ್ಮೊಮ್ಮೆ ಕಲಾವಿದರಿಂದ ಕಲೆಯೋ ಕಲೆಯಿಂದ ಕಲಾವಿದರೋ ಹೇಳಲಾಗುವುದಿಲ್ಲ. ಇದೆಲ್ಲಾ ನಮ್ಮ ಸಾಂಸ್ಕೃತಿಕ ಸಂಪತ್ತು. ವಿಜಾಪುರ ಜಿಲ್ಲೆಯಲ್ಲಿರುವ ವೈವಿಧ್ಯಮಯವಾದ ಜನಪದ ಕಲೆಗಳನ್ನೂ ವಿವಿಧ ಕಲಾವಿದರನ್ನೂ ಕಲಾ ತಂಡಗಳನ್ನೂ ಪ್ರಸ್ತುತ ಗ್ರಂಥದಲ್ಲಿ ಪರಿಚಯಿಸಿದೆ.

ಜಾನಪದದ ಆಸಕ್ತ ಅಧ್ಯಯನಕಾರರಾದ ಡಾ.ಎಂ.ಎನ್. ವಾಲಿಯವರು ಈ ಪುಸ್ತಕವನ್ನು ಬರೆದಿದ್ದಾರೆ.

–ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ಜಾನಪದ ಸಿರಿಭುವನ
ನಂ.1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ ಇ ಎಲ್ ರಸ್ತೆ, ಬೆಂಗಳೂರು-5600054 ದೂರವಾಣಿ: 080-23605033
janapadaparishath@hotmail.com